(SRI V. S. NARAYANA RAO.)

ಅಧಿಕಾರವಿಲ್ಲ. ಈ ತಿದ್ದುಪಡಿ ಜಾರಿಗೆ ಬಂದಮೇಲೆ ಆದರೆ ಸ್ಟ್ಯಾಂಡಿಂಗ್ ಸಮಿತಿಗೆ ಕೊಟ್ಟಿದ್ದಂಥ ಅಧಿಕಾರವನ್ನು ಒಹು ಮಟ್ಟಿಗೆ ಕಡಿಮೆ ಮಾಡಿದಂತಾಗುತ್ತದೆ. ಆದ್ದರಿಂದ ಎಷ್ಟು ಮಟ್ಟಿಗೆ ಕಡಿಮೆ ಮಾಡಬೇಕು, ಸಂಪೂರ್ಣ ಅಧಿಕಾರವನ್ನು ಕಾರ್ಪೊರೇಷನ್‌ಗೆ ಕೊಟ್ಟು ಬಿಡಬೇಕೇ ಅಥವಾ ಸ್ಟ್ಯಾಂಡಿಂಗ್ ಸಮಿತಿಗೆ ಸ್ವಲ್ಪ ಮಟ್ಟಿಗೆ ಅಧಿಕಾರವನ್ನು ಕೊಟ್ಟು ಅದರ ಮೇರೆ ಕಾರ್ಪೊರೇಷನ್‌ಗೆ ಹೆಚ್ಚಿನ ಅಧಿಕಾರ ಕೊಡಬೇಕೇ, ಅಥವಾ ಸ್ಟ್ಯಾಂಡಿಂಗ್ ಸಮಿತಿಗೆ ಈಗ ಇರತಕ್ಕ ಅಧಿಕಾರವನ್ನು ಎಷ್ಟು ಮಟ್ಟಿಗೆ ಇಳಿಸಬೇಕು ಎಂಬುದನ್ನು ಸ್ವಲ್ಪ ಕೂಲಂಕಷವಾಗಿ ವಿಚಾರ ಮಾಡಬೇಕಾಗಿದೆ.

ಅದೂ ಅಲ್ಲದೆ ಇದರಲ್ಲಿ ಇನ್ನೂ ಕೆಲವು ತಿದ್ದುಪಡಿಗಳಿವೆ. 50 ಸಾವಿರ ಇರುವುದನ್ನು 10 ಸಾವಿರಕ್ಕೂ, 1 ಲಕ್ಷ ಇರುವುದನ್ನು 50 ಸಾವಿರಕ್ಕೂ ಇಳಿಸಬೇಕೆಂದು ತಿದ್ದುಪಡಿ ಸೂಚಿಸಲಾಗಿದೆ. ಈ ತಿದ್ದುಪಡಿಗೂ 22 (a) ತಿದ್ದುಪಡಿಗೂ ಸ್ವಲ್ಪ ವಿರೋಧಾಭ್ಯಾಸವಾದಂತೆ ತೋರುತ್ತದೆ. ಇದನ್ನು ಸ್ವಲ್ಪ ನಿಧಾನವಾಗಿ ನೋಡಿ ತಿದ್ದುಪಡಿ ಮಾಡಬೇಕಾದ್ದು ಅಗತ್ಯ. ಈಗ ಬೆಂಗಳೂರು ಟ್ರಸ್ಟ್‌ಬೋರ್ಡ್ ಆಕ್ಟ್ ಬೇರೆ ಇದೆ. ಅದಕ್ಕೂ ಕಾರ್ಪೊರೇಷನ್ ಆಕ್ಟ್‌ಗೂ ಅನೇಕ ಕಡೆ ಒಂದಕ್ಕೊಂದಕ್ಕೆ ತಿಕ್ಕಾಟವಿದೆ. ಇದನ್ನೂ ಸಹ ಸ್ವಲ್ಪ ಕೂಲಂಕಷವಾಗಿ ನೋಡಬೇಕಾಗುತ್ತದೆ. ಇದನ್ನೆಲ್ಲಾ ನಿಧಾನವಾಗಿ ನೋಡೋಣವೆಂದರೆ ಈಗ ಹೊಸದಾಗಿ ಏಪ್ರಿಲ್ ತಿಂಗಳಲ್ಲಿ ಬಿಡ್ಜೆಟ್ ಪಾಸ್ ಮಾಡಬೇಕಾಗಿರುವುದರಿಂದ ಅವಶ್ಯಕವಾಗಿ ಕೆಲವು ತಿದ್ದುಪಡಿಗಳನ್ನು ಜಾರಿಗೆ ತರಬೇಕಾಗಿದೆ. ಆದ್ದರಿಂದ ಈ ಸಭೆಯ ಅಧಿವೇಶನ ಮುಗಿಯುವುದರೊಳಗೇ ಆ ಸಮಿತಿಯವರು ತಮ್ಮ ವರದಿಯನ್ನು ಕೊಡಲು ಸಮ್ಮತಿಸಬೇಕೆಂದು ಹೇಳಿ ಈ ತಿದ್ದುಪಡಿಯನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—The question is :

"That the City of Bangalore Municipal Corporation (Amendment) Bill, 1951, be referred to a Select Committee consisting of.—

Sri W. H. Hanumanthappa.
Sri B. M. Shamanna Gowda.
Lokasevaniratha M. Hanumanthiah.
Sri G. A. Acharya.
Sri M. C. Sivananda Sarma.
Janab Mohamed Hanief, and
The mover.

with instructions to report before the close of the session."

The motion was adopted.

The Mysore Inam Villages) Abolition of Inam Tenure) Bill, 1951.

Motion to refer.

***The Hon'ble Sri H. SIDDAIYA** (Minister for Revenue and Excise).— Sir, I beg to move :

"That the Mysore Inam Villages (Abolition of Inam Tenure) Bill, 1951, be referred to a Select Committee consisting of the following.

Sri T. Subramanya.
Sri M. V. Krishnappa.
Sri G. Narayana Gowda.
Sri T. Ramachar.
Sri T. Hanumiah.
Sri K. Subba Rao.
Sri M. Hutche Gowda.
Sri E. Channabyre Gowda.
Sri A. G. Bandi Gowda.
Sri A. G. Ramachandra Rao.
Sri M. Govinda Reddy.
Sri Mali Mariappa.
The Mover."

Sir, the abolition of Inams and Jahagirs in the State is being asked in the Legislature from a long time. There has been an insistent demand from the representatives of the people for the abolition of Inam villages particularly. As early as January 1948, in the Legislative Council, a resolution recommending the appointment of such a Committee and the abolition of the Inam tenures was urged and the same was accepted by the Government and a Committee called Gundappa Gowda Committee was appointed in August 1948 to examine the several issues connected with the revision of the land revenue system in the State and to make recommendations. One of the terms of reference to the Committee was to consider the feasibility of simplyfying the land tenures by the abolition of Jodi, Inam and Jahagir tenures and to recommend the principles of fair compensation in respect of each class. The recommendations contained in the Report of this Committee have been considered in pages 59 to 64 and they are summarized in the second part of that Report. It is now found desirable to abolish the Inam tenure villages at first so that most of the long-standing tenants of Inamdars can be registered as occupants of the lands held by them. Therefore this Bill is now placed before the Assembly.

At the very outset, I make one point very clear In the State of Mysore there are 2,134 inam villages of all classes, namely, Sarvamanya, Jodi and Khayamgutta—1,244 Jodi, 440 Khayamgutta and 450 Sarvamanya villages. Out of these, survey and settlement have been introduced to only 628 villages; the remaining are unsurveyed. It is now proposed to abolish the inam tenure of the inam villages by payment of compensation to the Inamdars on certain basis as stated in Clause 20

of this Bill. In Clause 1, Sub-clause (3) it is stated : this applies to all inam villages in the State including the Sringeri and Yelandur Jahagirs. The definitions of all these will be found in Clause 2. Now the Government will have power by notification to declare that any inam village specified in the notification has passed to and become vested in the State. A question will naturally arise on the abolition of the inam tenure as to what would be the consequences of such vesting. These are narrated in Clause 4. The entire inam village shall vest absolutely in the State of Mysore free from all encumbrances. And how the arreas are to be collected, who are responsible for collection and what are the rights of Inamdars after the inam lands vest in the Government are all read in these sections. In the same section we read the relationship between the Inamdar and any other person whose rights have vested in the State of Mysore : their rights. the extent of compensation the Inamdars are entitled to, the relationship of the superior holder and the inferior holder and the relationship of landlord and tenant are also defined. We read again in Clauses 5, 6 and 7 several classes of tenants ; and under Clause 8 how even the Inamdar, under special circumtances, can get himself registered as occupant. Of course, one can become an registered occupant subject to certain conditions. They are all defined in the several clauses. It is a Deputy Commissioner who is empowered under the Bill, to examine or investigate as to what extent the compensation is due to the Inamdar and what rights the tenants have and in what method and manner the tenants will have to get themselves registered as occupants of the lands. The rate of assessment is also to be fixed by the Deputy Commissioner subject to certain enquiry under clause 11. There remains in some parts of these inam villages certain buildings. As to what should become of these buildings, to what extent the Government can have their hands over them is also defined in Clause 12. Every building situated within the limits of an inam village and if that had been used as an office in connection with its administration or was being used as as a *Havadi* or Village Panchayet Hall, etc., becomes Government property. And in the meanwhile, *i.e.*, after the first day of July, 1948 and before the date of vesting, if any property has been sold away by the Inamdar, and he has no right to do so, while awarding compensation so much amount as he has realised by the sale of these buildings will naturally be deducted.

And then we have clause 18 which deals with the aspect as to how the compensation has to be determined and payment is to be made. The rate of compensation, etc., to be fixed is dealt with under clause 18 (i) and (ii). The total compensation payable in respect of the inam villages is also provided and also the mode of its calculation. This is defined in clause 20. If after enquiry and after the Deputy Commissioner fixes the rates of compensation to be given to the inamdar, the registered occupant is dissatisfied with the award etc., the Government will constitute special tribunals and the judge of that special tribunal will be an officer who is or has been a District Judge. That is defined. And the procedure in that court is laid down to be the same as that which obtains in a civil court under the Civil Procedure Code. There is also scope for preferring appeals against the orders of the Deputy Commissioner and even against the orders of the Special Tribunals. The Appellate Tribunal will consist of two Judges of the High Court nominated from time to time by the Chief Justice in that behalf. And even after all that, if it is found that the two Judges would not concur, then a third Judge will be nominated and his judgment shall be final. So the scope for getting redress in aggrieved cases is wide enough and there need not be any apprehensions on the part of any person who may be affected by this Bill. Clause 39 refers to the applicability of the provisions to the jahagirs of Sringeri and Yelandur. For the purposes of this Bill they are also to be treated as inam villages, and the conse-

(THE HON'BLE SRI H. SIDDAIYA.)

quential changes which will result therefrom are included in clause 41.

Government naturally will have to be empowered to make certain rules for the execution of the provisions of this Bill and these powers to make rules we and in clause 42. If any person were to act in violation of the provisions of this Bill, such a person is made liable for punishment. The punishment is also prescribed; it is imprisonment which may extend to three months or fine which may extend to two hundred rupees or both.

I think this Bill was long overdue and I place it before the august Assembly for its approval.

Mr. SPEAKER.—Motion moved :

"That the Mysore Inam Villages (Abolition of Inam Tenure) Bill, 1951, be referred to a Select Committee consisting of—

Sri T. Subramanya.
Sri M. V. Krishnappa.
Sri G. Narayana Gowda.
Sri T. Ramachar.
Sri T. Hanumaiah.
Sri K. Subba Rao.
Sri M. Huchaiah Gowda.
Sri B. Channabyre Gowda.
Sri A. G. Bandi Gowda.
Sri A. G. Ramachandra Rao.
Sri M. Govinda Reddy.
Sri Mali Mariappa
and the mover."

Mushir-ul-Mulk Janab J. MOHAMED IMAM (Chitaldrug *cum* Tumkur—Muslim) —If there is no objection, I suggest that the name of Sri T. C. Hobnappa from may party may be included.

Janab SYED ABDUR RAHMAN (Chikmagalu *cum* Shimoga-Muslim).—May I suggest the name of Janab Hanief to be included in the Select Committee ?

The Hon'ble Sri SIDDAIYA.—I have no objection.

ಶ್ರೀ ಟಿ. ರಾಮಾಚಾರ್ (ಕೋಲಾರ ಜಿಲ್ಲೆ).—ಅಧ್ಯಕ್ಷರೇ, ಈಗ ಈ ಸಭೆಯ ಮುಂದೆ ಮಾನ್ಯ ರೆವೆನ್ಯೂ ಸಚಿವರಾದ ಶ್ರೀ ಸಿದ್ದಯ್ಯನವರು ಮಂಡಿಸಿರತಕ್ಕ ಈ ಮಸೂದೆಯನ್ನು ಸ್ವಾಗತಿಸುತ್ತಾ, ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಮಸೂದೆಗೆ ನಾನೊಂದು ತಿದ್ದುಪಡಿಯನ್ನು ಕಳುಹಿಸಿದ್ದೇನೆ. ಅದು ಈ ರೀತಿ ಇದೆ :

"That the Mysore Inam Villages (Abolition of Inam Tenure) Bill, 1951 be circulated for the purpose of eliciting opinion of the public thereon and be placed before the Assembly after two months from this date."

ಈ ತಿದ್ದುಪಡಿಯಲ್ಲಿ ನಾನು ಎರಡು ತಿಂಗಳ ಅವಧಿಯನ್ನು ಕೇಳಿದ ಉದ್ದೇಶವೇನೆಂದರೆ, ಈ ಮಸೂದೆ ಬಹಳ ಮುಖ್ಯವಾದುದು ಮತ್ತು ಆರ್ಜೀಯದಿಂದ ನಡೆದುಕೊಂಡು ಬಂದಿರುವ ಜೋಡಿದಾರ ಪದ್ಧತಿ ಮತ್ತು ರೈತರ ಸಂಪರ್ಕದ ವಿಚಾರಕ್ಕೆ ಸಂಬಂಧಪಟ್ಟ ಈ ಮಸೂದೆಯ ವಿಚಾರದಲ್ಲಿ ಸಾರ್ವಜನಿಕರ ಅಭಿಪ್ರಾಯ ಪಡೆದು, ದೀರ್ಘವಾಗಿ ಆಲೋಚನೆ ಮಾಡಿ ಎಲ್ಲರಿಗೂ ಸಮರ್ಪಕವಾಗಿರುವಂತಹ ರೀತಿಯಲ್ಲಿ ಮಸೂದೆಯನ್ನು ತಂದು ಅದನ್ನು ಈ ಸಭೆ ಅಂಗೀಕರಿಸಬೇಕೆಂಬುದೇ ನನ್ನ ಉದ್ದೇಶವಾಗಿತ್ತು. ಈಗ ಮಾನ್ಯ ಸಚಿವರು ಈ ಮಸೂದೆಯನ್ನು ಸೆಲೆಕ್ಟ್ ಸಮಿತಿಗೆ ಒಪ್ಪಿಸಿ ಕಾಲಾವಕಾಶ ಕೊಟ್ಟಿರುವುದರಿಂದ ನನ್ನ ತಿದ್ದುಪಡಿಯನ್ನು ಸೂಚಿಸುವುದಕ್ಕೆ ನಾನು ಇಷ್ಟಪಡುವುದಿಲ್ಲ. ಈ ಸಭೆಗೆ ಸಂಬಂಧಪಟ್ಟ 34ನೆಯ ನಿಬಂಧನೆಯ ಪ್ರಕಾರ ಮೂರು ತಿಂಗಳ ಕಾಲಾವಕಾಶಕ್ಕೆ ಕಡಿಮೆಯಿಲ್ಲದಂತೆ ವರದಿಯನ್ನು ಸೆಲೆಕ್ಟ್ ಸಮಿತಿಯವರು ಕೊಡಬೇಕೆಂದಿದೆ. ವರದಿ ಈ ಸಭೆ ಮುಕ್ತಾಯವಾಗುವುದಕ್ಕೆ ಮುಂಚೆಯೂ ಬಾರದೇ ಇರುವುದರಿಂದ ನನ್ನ ಉದ್ದೇಶ ಸಫಲವಾಗಿದೆ. ಮೂರು ತಿಂಗಳ ಕಾಲಾವಕಾಶ ಬಂದಿದೆ. ಅಷ್ಟರಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಶೇಖರಿಸಿ, ಸೆಲೆಕ್ಟ್ ಸಮಿತಿಯ ಅಭಿಪ್ರಾಯವನ್ನೂ ಪಡೆದು ಏನು ತಿದ್ದುಪಡಿ ಮಾಡಬೇಕೋ ಅದನ್ನು. ಮಾಡುತ್ತಾರೆಂದು ನಂಬಿದ್ದೇನೆ.

ಈಗ ಈ ಮಸೂದೆಯ ವಿಚಾರದಲ್ಲಿ ದೀರ್ಘವಾದ ಭಾಷಣ ಮಾಡದೆ ಒಂದೆರಡು ವಿಷಯಗಳನ್ನು ಮಾತ್ರ ಸಭೆಯ ಮುಂದಿಡಲು ಬಯಸುತ್ತೇನೆ. ಈ ಮಸೂದೆಯನ್ನು ನೋಡಿದರೆ ಮುಖ್ಯವಾಗಿ ಜೋಡಿ ಗ್ರಾಮಗಳ ರೈತರ ಹಿತದೃಷ್ಟಿಯಿಂದ ಇದನ್ನು ರಚನೆ ಮಾಡಿದ ಹಾಗೆ ಭಾಸವಾಗುತ್ತದೆ. ಆರ್ಜೀಯದಿಂದ ರೈತರೂ ಜೋಡಿದಾರರೂ ನಮ್ಮ ದೇಶದಲ್ಲಿ ಅನ್ಯೋನ್ಯವಾಗಿದ್ದುಕೊಂಡು ಜೋಡಿಹಳ್ಳಿಗಳಲ್ಲಿ ಅನೇಕ ಕಟ್ಟಡಗಳನ್ನೂ ಕೆರೆಗಳನ್ನೂ ಬಾವಿಗಳನ್ನೂ ದೇವಸ್ಥಾನಗಳನ್ನೂ ಕಟ್ಟಿಸಿಕೊಂಡು ಬಂದಿರುವ ನಿದರ್ಶನಗಳು ಎಷ್ಟೋ ಇವೆ. ಇದುವರೆಗೂ ಜೋಡಿದಾರರೂ ರೈತರೂ ಒಂದೇ ಕುಟುಂಬಕ್ಕೆ ಸೇರಿದವರೆಂಬ ಭಾವನೆಯಿಂದ ನಡೆದುಕೊಂಡು ಬರುತ್ತಿದ್ದರು. ಈಗ ಕಾಲ ಬದಲಾಯಿಸಿದೆ. ರೈತರಿಗೂ ತಮ್ಮ ಸ್ವಂತಹಕ್ಕು ಬಾಧ್ಯತೆಗಳನ್ನು ಪಡೆದುಕೊಳ್ಳಬೇಕೆಂಬ ಅಭಿಲಾಷೆಯುಂಟಾಗಿದೆ. ಈಗಿನ ಕಾಲದಲ್ಲಿ ಹಕ್ಕುಬಾಧ್ಯತೆಗಳಿಗಾಗಿ ಹೊಡೆದಾಡದವರು ಎಲ್ಲರಿಗೂ ಒಂದು ಸಂಪ್ರದಾಯವಾಗಿ ಹೋಗಿದೆ. ಹಾಗೆಯೇ ಈ ರೈತರೂ ಹಕ್ಕು ಬಾಧ್ಯತೆಗಳನ್ನು ಪಡೆದುಕೊಳ್ಳಲು ಜವಾಬ್ದಾರಿ ಸರ್ಕಾರ ಬಂದಾಗಿನಿಂದ. ಮೂರು ವರ್ಷಗಳಿಂದ, ಈ ಚಳುವಳಿ ಹರಡುತ್ತ ಬಂದಿದೆ. ಈ ರೈತರ ಹಿತದೃಷ್ಟಿಯ ಜೊತೆಗೆ, ನನ್ನ ಅಭಿಪ್ರಾಯದಲ್ಲಿ ಜೋಡಿದಾರರ ಹಿತದೃಷ್ಟಿಯನ್ನೂ ಮರೆಯುಕೂಡದೆಂದು ಸಭೆಯ ಮುಂದೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಜೋಡಿದಾರರೂ ಮೈಸೂರು ದೇಶದ ಪ್ರಜೆಗಳೇ ರೈತರೂ ಮೈಸೂರು ದೇಶದ ಪ್ರಜೆಗಳೇ. ಒಬ್ಬರಿಗೆ ಯಾವ ಯಾವ ಹಕ್ಕು ಬಾಧ್ಯತೆಗಳೂ ಇವೆಯೋ ಅವುಗಳನ್ನು ಇನ್ನೊಬ್ಬರಿಗೂ ವಹಿಸಿಕೊಡಬೇಕಾದದ್ದು ಸರ್ಕಾರದ ಕರ್ತವ್ಯ. ಈ ದೃಷ್ಟಿಯಿಂದ ಜೋಡಿದಾರರಿಗೆ ಯಾವ ಯಾವ ಹಕ್ಕು ಬಾಧ್ಯತೆಗಳಿವೆಯೋ ಅವುಗಳನ್ನು ಕೂಡ ಸಾಧ್ಯವಾದಷ್ಟು ಮಟ್ಟಿಗೆ ಈಗಿನ ಕಾಲ ಸನ್ನಿವೇಶಗಳಿಗನುಗುಣವಾಗಿ ಸರಿಪಡಿಸಿಕೊಂಡು ಉಳಿಸಿಕೊಟ್ಟು ಅವರೂ ನಮ್ಮ ದೇಶದಲ್ಲಿ ತಮ್ಮ ಜೀವನವನ್ನು ಸುಸೂತ್ರವಾಗಿ ನಡೆಸಿಕೊಂಡು

ಬರಬೇಕೆಂಬ ಅಭಿಪ್ರಾಯವನ್ನಿಟ್ಟುಕೊಂಡು ಈ ಮಸೂದೆಯನ್ನು ಸಾಧ್ಯವಾದಷ್ಟು ಕಡೆ ಎಲ್ಲೆಲ್ಲಿ ತಿದ್ದುಪಾಟು ಮಾಡಬೇಕಾದ ಅವಶ್ಯಕತೆ ಇದೆಯೋ ಅಲ್ಲಿ ಮಾಡಬೇಕೆಂಬುದು ನನ್ನ ಅಭಿಪ್ರಾಯವಾಗಿದೆ.

ಇನ್ನೊಂದು ವಿಷಯವೇನೆಂದರೆ, ಜೋಡೀದಾರರನ್ನೇ ಕರು ಹೊರಗಡೆ ಇದ್ದುಕೊಂಡು ತಮ್ಮ ಜೋಡಿಗ್ರಾಮಗಳಿಂದ ಬರತಕ್ಕ ಅಲ್ಪಸ್ವಲ್ಪ ವರಮಾನದಿಂದ ಜೀವನವನ್ನು ನಡೆಸಿಕೊಂಡು ಬರತಕ್ಕವರಾಗಿದ್ದಾರೆ. ಇಂಥಾ ಸಣ್ಣಪುಟ್ಟ ಜೋಡಿದಾರರ ಹಿತದೃಷ್ಟಿಯನ್ನು ತಾವು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು. ಹೀಗೆ ನೂರಾರು ವರ್ಷಗಳಿಂದ ಇವರು ತಮ್ಮ ತಮ್ಮ ಜೋಡೀಗ್ರಾಮಗಳಿಂದ ಬರುತ್ತಿದ್ದಂಥ ಅಲ್ಪಸ್ವಲ್ಪ ಉತ್ಪತ್ತಿಯಮೇಲೆ ತಮ್ಮ ಜೀವನವನ್ನು ನಡೆಸುತ್ತಿದ್ದವರನ್ನೆಲ್ಲಾ ಈಗ ಏಕ್‌ದಂ ಹೊರಗೆ ಹಾಕುವುದರಿಂದ ಇವರೆಲ್ಲರೂ ಕೆಲಸವಿಲ್ಲದೆ ಇರತಕ್ಕವರ ಗುಂಪಿಗೆ ಸೇರಬೇಕಾಗಿ ಬರುತ್ತದೆ ಆದ್ದರಿಂದ ಹಾಗೆ ಮಾಡದೆ ಇವರುಗಳೆಲ್ಲಾ ಸುಗಮವಾಗಿ ಅವರವರ ಜೀವನೋಪಾಯವನ್ನು ನಡೆಸಿಕೊಂಡು ಹೋಗತಕ್ಕ ಒಂದು ಏರ್ಪಾರ್ಡವನ್ನು ಕಲ್ಪಿಸತಕ್ಕದ್ದು ಬಹು ಮುಖ್ಯ ವಿಷಯವಾಗಿದೆ.

ಇನ್ನೊಂದು ವಿಚಾರವೇನೆಂದರೆ—ಈ ಮಸೂದೆಯಲ್ಲಿ ಕೆಲವು ರೈತರುಗಳನ್ನು ಸೇರಿಸಿದ್ದಾರೆ. ಅದರಲ್ಲಿ ಕೆಲವರು ಖಡೀಂ ರೈತರೆಂದೂ, ಕೆಲವರನ್ನು ಖಾಯಂ ರೈತರೆಂದೂ ಮತ್ತೆ ಕೆಲವರನ್ನು ಕ್ಯಾಸಿಖಾಯಂ ರೈತರೆಂದೂ ವಿಂಗಡ ಮಾಡಿದ್ದಾರೆ. ಅನೇಕ ಕಾರಣಗಳಿಂದ ಜಮೀನ್ದಾರರು ತಮ್ಮ ಜಮೀನನ್ನು ಪಾರಕ್ಕೆ ಕೊಡತಕ್ಕದ್ದು ಪದ್ಧತಿಯಾಗಿ ಬಂದಿದೆ. ಆದರೆ ಇಂತಹ ರೈತರುಗಳ ವಿಚಾರವಾಗಿ ಆಗಲೀ ಜಮೀನುಗಳ ಬಗ್ಗೆ ಆಗಲೀ ಈ ಮಸೂದೆಯಲ್ಲಿ ಯಾವ ಸೂಚನೆಯನ್ನೂ ಮಾಡಿರುವುದಿಲ್ಲ. ಇದು ಒಂದು ದೊಡ್ಡ ಲೋಪ. ಆದರೆ ಇಲ್ಲಿಯತನಕ ಹಕ್ಕುದಾರರಾಗಿದ್ದವರಿಗೆ ಅವರ ಹಕ್ಕುದಾರಿಕೆಯನ್ನು ತಪ್ಪಿಸುವ ಬದಲು ಪಾರಕ್ಕೆ ಜಮೀನುಗಳನ್ನು ಮಾಡುತ್ತಿದ್ದಂಥ ರೈತನ ಪತ್ತು ಜೋಡಿದಾರನ ಹಕ್ಕನ್ನುಳಿಯುವಂತೆ ಮಾಡತಕ್ಕದ್ದು ಅತ್ಯವಶ್ಯಕವಾದದ್ದು. ಹೀಗೆ ವಾರದ ಜಮೀನುಗಳನ್ನು ಸಾಗುವಳಿ ಮಾಡುವುದರಿಂದಲೇ ಕೆಲವು ಜನ ಜೋಡಿದಾರರು ತಮ್ಮ ಉದರಭರಣದನ್ನು ನಡೆಸುತ್ತಿದ್ದರು. ಈಗ ಅಂಥವರ ಜಮೀನುಗಳನ್ನೆಲ್ಲಾ ಸರ್ಕಾರದವರು ಕಿತ್ತುಕೊಳ್ಳುವುದು ಸರಿಯಲ್ಲ. ಆದರೆ ಈ ಮಸೂದೆ ಸದ್ಯದಲ್ಲೇ ಸೆಲೆಕ್ಟ್ ಸಮಿತಿಯವರ ಮುಂದೆ ಪರ್ಯಾಲೋಚನೆಗೆ ಬರತಕ್ಕದ್ದಾಗಿದೆ. ಆಗ್ಯೆ ಆ ಸಮಿತಿಯವರು ಈ ಅಂಶಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆಮಾಡಿ ಎಲ್ಲರ ಹಿತದೃಷ್ಟಿಯಿಂದಲೂ ಅಂದರೆ ರೈತಾಪಿಜನರ ಮತ್ತು ಜೋಡಿದಾರರೆಲ್ಲರ ಹಿತದೃಷ್ಟಿಯನ್ನೂ ಕಾಪಾಡಿ ಯಾರಿಗೂ ತೊಂದರೆಯಾಗದಂತೆ ಸೂಕ್ತ ಏರ್ಪಾವಣೆಗಳನ್ನು ಮಾಡಬೇಕೆಂದು ಸೂಚಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ರಾಮಾಚಾರ್ ಅವರು 3 ತಿಂಗಳಿಗೆ ಮುಂಚಿತವಾಗಿ ಸೆಲೆಕ್ಟ್ ಸಮಿತಿಯವರ ವರದಿಯು ಸ್ಟ್ಯಾಂಡಿಂಗ್ ಆರ್ಡರ್ 34 ರ ಪ್ರಕಾರ ಈ ಸಭೆಯ ಮುಂದೆ ಬರಲು ಅವಕಾಶವಿಲ್ಲವೆಂದು ತಿಳಿಸಿದರು. ಆದರೆ ಈ ರೂಲ್ಸನ್ನು ಈಗ ಬದಲಾವಣೆ ಮಾಡಲಾಗಿದೆ. ಅದು ತಮ್ಮೆಲ್ಲರ ಗಮನಕ್ಕೂ ಬಂದಿರಬೇಕೆಂದು ಭಾವಿಸಿದ್ದೇನೆ. ಈ ಬಗ್ಗೆ ಈ ತಿಂಗಳು 10ನೆಯ ತಾರೀಖಿನಲ್ಲೇ ಒಂದು ನೋಟಿಫಿಕೇಷನ್ನನ್ನು ಹೊರಡಿಸಲಾಗಿದೆ.

"Such report shall be made at the session next after the session at which the Bill was referred to the Select Committee unless the Assembly orders the report to be made sooner.

'Provided that the time-limit referred to in this sub-order shall not apply in the case of Bills imposing taxation."

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಮೂರು ತಿಂಗಳಿಗೆ ಮುಂಚಿತವಾಗಿ ಪುನಃ ಈ ಸಭೆಯನ್ನು ಕರೆಯುವುದಿಲ್ಲವೆಂಬ ಭರವಸೆ ಎಲ್ಲಿದೆ? ಈ ಅಧಿವೇಶನದಲ್ಲಿ ನಡೆಸತಕ್ಕ ಕಾರ್ಯಕ್ರಮಗಳ ಪಟ್ಟಿ ಹೆಚ್ಚಾಗಿದ್ದು ಅವುಗಳೆಲ್ಲವೂ ಈ ಅಧಿವೇಶನದಲ್ಲಿ ಪೂರೈಸದೇ ಇದ್ದ ಭಾಗದಲ್ಲಿ ಪುನಃ ಈ ಅಧಿವೇಶನವನ್ನು ಮುಂದಿನ ತಿಂಗಳಲ್ಲೇ ಕರೆಯಬಹುದು. ಅಂದ ಮೇರೆ ಈ ಮೂರು ತಿಂಗಳ ಕಾಲಾವಕಾಶವೆಲ್ಲಿರುತ್ತದೆ? ಇದು ಬಹಳ ಮುಖ್ಯವಾದ ಬಿಲ್ಲು, ಇದನ್ನು ನಾವೆಲ್ಲರೂ ಆಲೋಚನೆ ಮಾಡಿ, ಸಾರ್ವಜನಿಕರ ಅಭಿಪ್ರಾಯ ಈ ಬಗ್ಗೆ ಯಾವ ರೀತಿ ಇದೆಯೆಂಬುದನ್ನು ಗ್ರಹಿಸಿ ಒಂದು ತೀರ್ಮಾನಕ್ಕೆ ಬರುವ ತನಕ ಪುನಃ ಈ ಸಭೆಯನ್ನು ಕರೆಯುವುದಿಲ್ಲವೆಂಬ ಭರವಸೆಯನ್ನು ಕೊಟ್ಟರೆ ಆಗ ಬಹುದು.

* ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಮಾನ್ಯ ರವೆನ್ಯೂ ಸಚಿವರು ಈಗ ಸಭೆಯ ಮುಂದೆ ಪಂಡಿಸಿರುವ ಜೋಡಿ ಮತ್ತು ಇನಾಮ್‌ಗಿರಿಗಳನ್ನು ಮನ್ನಾ ಮಾಡತಕ್ಕ ಈ ಮಸೂದೆಗೆ ಮಾನ್ಯ ಸದಸ್ಯರೆಲ್ಲರೂ ಇದನ್ನು ಒಮ್ಮತದಿಂದ ಸ್ವಾಗತಿಸಿ ಇವಕ್ಕೆ ಬೆಂಬಲ ನೀಡತಕ್ಕದ್ದು. ನ್ಯಾಯವಾಗಿದೆ. ಅನೇಕ ಜನರು ಈ ಮಸೂದೆಯನ್ನು ಇನ್ನೂ ಬಹಳ ಮುಂಚಿತವಾಗಿಯೇ ತರಬೇಕಾಗಿತ್ತೆಂದು ಹೇಳುತ್ತಿದ್ದಾರೆ. ಆದರೆ ನಮ್ಮ ಪ್ರಜಾ ಸರ್ಕಾರ ಬಂದು 3–4 ವರ್ಷಗಳಾದರೂ ಇದನ್ನು ಮಾಡುವ ಕೈ ಬಿಚ್ಚಿದ್ದಾಗಿದೆ. ಇಂದು ಇರತಕ್ಕ ಸ್ಥಿತಿಗತಿಯಲ್ಲಿ ನಮ್ಮ ಸಂಸ್ಥಾನದಲ್ಲಿ ರತಕ್ಕ ಸುಮಾರು 2,300 ಜೋಡಿ ಗ್ರಾಮದಲ್ಲಿರತಕ್ಕ ರೈತರಿಗೂ ಮತ್ತು ಜೋಡಿದಾರರಿಗೂ ಇಂದು ಅವರ ಸಂಪರ್ಕದ ವಿಷಯದಲ್ಲಿ ಅಷ್ಟು ಮಧುರ ಬಾಂಧವ್ಯ ವಿದ್ದಂತೆ ಕಂಡುಬರುತ್ತಿಲ್ಲ ಈ ಕಾರಣದಿಂದ ಸರ್ಕಾರದವರು ಭೂಕಂದಾಯ ಪರಿಶೀಲನಾ ಸಮಿತಿಯೊಂದನ್ನು ರಚಿಸಿ, ಸದರೀ ಸಮಿತಿಯವರು ಸೂಚಿಸಿರುವ ನಿಯಮಾವಳಿಗಳ ಪ್ರಕಾರ ಈ ಒಂದು ಮಸೂದೆಯನ್ನು ತಯಾರಿಸಿ ಅದನ್ನು ಇಂದು ಸಭೆಯ ಮುಂದಿಟ್ಟಿದ್ದಾರೆ. ಆದರೆ ಈಗ ತಾನೆ ಮಾತನಾಡಿದ ಶ್ರೀ ರಾಮಾಚಾರ್ ಅವರು ಈ ಬಿಲ್ಲನ್ನು ಸೆಲೆಕ್ಟ್ ಸಮಿತಿಯವರ ಪರ್ಯಾಲೋಚನೆಗೆ ಹಾಕಿದನಂತರ ಇದಕ್ಕೆ ಸಾರ್ವಕಾಶ್ಯ ಕಾರಾವಕಾಶಕೊಡಬೇಕೆಂದೂ, ಆವರು ಈ ಬಗ್ಗೆ ಇನ್ನೂ ಸಾರ್ವಜನಿಕರ ಅಭಿಪ್ರಾಯವನ್ನು ಶೇಖರಿಸಬೇಕಾಗಿದೆಯೆಂದೂ ತಿಳಿಸಿದ್ದನ್ನು ಒಪ್ಪಿಕೊಳ್ಳಬಹುದು. ಅವರು ರೈತರು ಮತ್ತು ಜೋಡಿದಾರರು—ಈ ಇಬ್ಬರ ಅಭಿಪ್ರಾಯಗಳನ್ನು ತಗೆದುಕೊಂಡು ಮಾಡುವುದರಲ್ಲಿ ಯಾರ ಅಭ್ಯಂತರವೂ ಇಲ್ಲ. ಇಂದಿನ ಕಾಲದಲ್ಲಿ ಈ ಜೋಡೀದಾರರಿಗೂ ಮತ್ತು ರೈತರಿಗೂ ಒಂದು ವಿಷಮವಾದ ಮಧುರ ಭಾಂಧವ್ಯವಿತ್ತು. ಆಗ್ಯೆ ಜೋಡಿದಾರರು ರೈತರನ್ನು ತಮ್ಮ ಮಕ್ಕಳೋಪಾದಿಯಲ್ಲೂ ರೈತರು ಆ ಜೋಡಿದಾರರನ್ನು ತಮ್ಮ ತಂದೆಗಳೋಪಾದಿಯಲ್ಲೂ ಭಾವಿಸಿಕೊಂಡು ಹೋಗುತ್ತಿದ್ದರು. ಆದರೆ ಇಂದು ಪ್ರಪಂಚದ ಸ್ಥಿತಿಗತಿಯೇ ಪೂರಾ ಬದಲಾವಣೆಯಾಗಿ ಹೋಗಿದೆ. ನಮ್ಮ ಭಾರತದಲ್ಲಿ 630—640 ಸಣ್ಣ ಸಂಸ್ಥಾನಗಳನ್ನೆಲ್ಲಾ ಒಟ್ಟುಗೂಡಿಸಿ 11 ಸಂಸ್ಥಾನ

(ಶ್ರೀ ಎಂ. ವಿ. ಕೃಷ್ಣಪ್ಪನವರು).

ಗಳನ್ನಾಗಿ ಮಾಡಿದಾಗ, ಅಷ್ಟು ಹಿಂದಿನಿಂದಲೂ ಅವುಗಳನ್ನು ಅನುಭವಿಸುತ್ತಿದ್ದು ಈ ದಿವನ ಅವುಗಳನ್ನು ಬಿಟ್ಟು ಕೊಟ್ಟನಂತರ, ಅವರ ಮನಸ್ಸೂ ಬದಲಾವಣೆ ಹೊಂದುವುದರಲ್ಲಿ ಆಶ್ಚರ್ಯವೇನೂ ಇಲ್ಲ; ಇದಾಂತೆಯೇ ಜೋಡಿದಾರರ ವಿಷಯದಲ್ಲೂ ಒಬ್ಬರಿಗೊಬ್ಬರು ಆಕ್ಷೇಪಣೆಗಳನ್ನು ಮಾಡುತ್ತ ರೈತನಾಗಿರತಕ್ಕವನು ತಾನು ಎಷ್ಟು ವರ್ಷ ಕಷ್ಟಪಟ್ಟು ಬೆಳೆದರೂ ತನಗೇನು ಸುಖ ಎಂಬ ಮನೋಭಾವನೆ ಹುಟ್ಟಿ ರೈತರಲ್ಲಿ ವೈಮತ್ಯವನ್ನುಂಟುಮಾಡಿ ಯಲ್ಲಿ ತೀರಾ ಜಿಗುಪ್ಸೆಗೊಂಡಿದ್ದಾನೆ. ಹೀಗೆ ಯಾರು ಬೆವರು ಸುರಿಸಿ ಕಷ್ಟಪಟ್ಟು ಕೆಲಸಮಾಡುತ್ತಾರೋ ಅಂಥವರಿಗೆ ಆ ಜಮೀನಿನ ಮೇಲೆ ಹಕ್ಕಿಲ್ಲವೆಂದು ಹುಟ್ಟಿದ ಕೂಡಲೇ ಅತನು ಕಷ್ಟಪಟ್ಟು ತಾನು ಕೆಲಸವನ್ನೇಕೆ ಮಾಡಬೇಕು ಎಂಬ ನಿರುತ್ಸಾಹದಿಂದ ಕೆಲಸವನ್ನೇ ಮಾಡುತ್ತಿಲ್ಲ. ಇಂಥಾ ಒಂದು ಹಕ್ಕುಸ್ಥಾಪನೆಗಾಗಿ ಇಂದು ಇಡಿ ಪ್ರಪಂಚವೇ ಹೊಡೆದಾಡುತ್ತಿದೆ. ಬಸಿಲಿನಲ್ಲಿ ಬಳಲಿ ದುಡಿಯುವ ಮನುಷ್ಯ ಇಂದು ಮೋಟಾರು ಕಾರಿನಲ್ಲಿ ಪ್ರಯಾಣಮಾಡತಕ್ಕವರನ್ನು ದುರುದುರನೆ ನೋಡುತ್ತಿದ್ದಾನೆ. ಕಷ್ಟಪಟ್ಟು ದುಡಿಯತಕ್ಕ ಮನುಷ್ಯನಿಗೆ ಯಾವ ಹಕ್ಕೂ ಇಲ್ಲವೆಂದೆ, ಆತನಿಗೇನು ಸುಖವಿದೆ? ಹಾಗೆ ಕಷ್ಟಪಡತಕ್ಕವನಿಗೆ ಸುಖವಿಲ್ಲದ ಮೇಲೆ ಕಷ್ಟಪಟ್ಟು ಕೆಲಸವನ್ನು ಏಕೆ ಮಾಡಬೇಕೆಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಇದೇ ರೀತಿ ಯೂರೋಪಿನಲ್ಲಿಯೂ ಕೂಡ ನಡೆದ ನಿದರ್ಶನಗಳಿವೆ ಚೈನಾ ನಾತ್ಸಾಟಿಬೆಟ್ ದೇಶದ ಆಸ್ತಿಯನ್ನು ಅಲ್ಲರುವ ಜನಗಳಿಗೆಲ್ಲಾ ಹಂಚಬೇಕೆಂಬ ಒಂದು ತತ್ವ ಸ್ಥಾಪಿಸ ಬೇಕೆಂದಿದ್ದಾರೆ. ಹಿಂದೆ ಎಂದೂ ನಡೆಯದೆ ಇದ್ದಂಥ ವಿಚಾರಗಳು ಈಗ ನಡೆಯುತ್ತಿವೆ. ಇದೇನೂ ದೂರದ ಮಾತಲ್ಲ. ಆದ್ದರಿಂದ ಹಿಂದೆ ಎಂದೂ ನಡೆಯದಂಥಾದ್ದು ಇಂದು ನಡೆಯಬಾರದೆಂದು ಹೇಳತಕ್ಕದ್ದು ಸತ್ಯಕ್ಕೆ ಬಹಳ ದೂರವಾದ ಮಾತು.

ಈದಿವನ ಈ ಕಾರ್ಯ ಇದನ್ನು ಮಾಡದೇಯಿದ್ದರೆ ಇನ್ನೊಂದು ಸರ್ಕಾರ ಬಂದು ಮಾಡಲೇಬೇಕಾಗುತ್ತದೆ. ಈ ದಿವನ ಜೋಡಿದಾರರ ವಿಚಾರದಲ್ಲಿ ಕೈ ಹಾಕಿದೆ. ನಾಳೆ ದಿವನ ಶ್ರೀಮಂತರ ವಿಚಾರದಲ್ಲೂ ಕೈಹಾಕಬೇಕಾಗುತ್ತದೆ. ಬೆಂಗಳೂರಿನಲ್ಲಿ ಅನೇಕರು ನಾನ್ಯಾರು ಮನೆಗಳನ್ನು ಕಟ್ಟಿಕೊಂಡು ಬೇಕಾದಷ್ಟು ಬಾಡಿಗೆ ತೆಗೆದುಕೊಳ್ಳುತ್ತಿದ್ದಾರೆ. ಜೋಡಿ ಗ್ರಾಮ ಗಳನ್ನು ಮಾರಿ ಬಂದ ಹಣವನ್ನು ಬೇರೆ ರೀತಿಯಲ್ಲಿ ವಿನಿಯೋಗಿಸಿ ಸುಖವಾಗಿದ್ದಾರೆ. ಅಂಥವರ ವಿಚಾರಕ್ಕೆ ಏಕೆ ಸರ್ಕಾರ ಕೈಹಾಕುವುದಿಲ್ಲ ಎಂದು ಜೋಡಿದಾರರು ಕೇಳುತ್ತಿದ್ದಾರೆ. ಅದು ನಿಜ. ಈ ದಿವಸವಲ್ಲದಿದ್ದರೆ ನಾಳೆ ದಿವಸವಾದರೂ ಆ ರೀತಿ ಮಾಡಲೇಬೇಕಾಗುತ್ತದೆ. ಅದು ಬಹಳ ದೂರವಿಲ್ಲ. ನಾಲ್ಕೈದು ವರ್ಷಗಳಲ್ಲೇ ಆ ರೀತಿಯ ಒಂದು ಕಾನೂನು ಬಂದರೂ ಬರಬಹುದು. ಹೆಚ್ಚು ಜಮೀನು ಹೆಚ್ಚು ಮನೆ ಮತ್ತು ಹೆಚ್ಚು ಹಣ ಇಟ್ಟುಕೊಂಡಿರುವವರಿಗೂ ಒಂದು ವ್ಯವಸ್ಥೆ ಮಾಡಲೇಬೇಕಾಗುತ್ತದೆ.

ಶ್ರೀ ಜಿ. ಎ. ಆಚಾರ್ಯರು.—ಗಾಂಧೀಜಿಯವರು ಹೀಗೆ ಮಾಡಬೇಕೆಂದು ಖಾದಿಯನ್ನು ಧರಿಸಿರುವವರಿಗೆ ಹೇಳಿದ್ದರೆ?

ಶ್ರೀ ಎಂ. ವಿ. ಕೃಷ್ಣಪ್ಪನವರು.—ಜೋಡಿದಾರರನ್ನು ಕಡಿಸಬೇಕೆಂದು ಈ ರೀತಿ ಮಾಡುತ್ತಿಲ್ಲ. ಆದ್ದರಿಂದ ವ್ಯಥಾ ಆರೋಪ ಮಾಡುವುದು ಸರಿಯಲ್ಲ. ಈ ವಿಚಾರದಲ್ಲಿ ಬಹು ಬೇಗ ಕಾರ್ಯಕ್ರಮ ಕೈಗೊಳ್ಳಬೇಕಾಗಿತ್ತು. ಈಗಲಾದರೂ ಜಾಗ್ರತೆಯಾಗಿ ಕಾನೂನನ್ನು ಜಾರಿಗೆ ತಂದು ರೈತರಿಗೂ ಜೋಡಿದಾರರಿಗೂ ವಿರಸವಾಗದಂತೆ ಪರಸ್ಪರ ಸಂಬಂಧವನ್ನು ಕಲ್ಪಿಸಿ ಸುಗಮವಾಗಿ ಮುಂದೆ ಕೆಲಸ ನಡೆಯುವಂತೆ ಮಾಡಲು ಸರ್ಕಾರದವರು ಸಹಾಯಕರಾಗುತ್ತಾರೆಂದು ನಂಬಿದ್ದೇನೆ. ಜೋಡಿದಾರರು, ಅವರ ಮಕ್ಕಳು ಮತ್ತು ಮೊಮ್ಮಕ್ಕಳು ಮುಂದೆ ಸುಖವಾಗಿ ಬಾಳಬೇಕು. ಕೋರ್ಟು ಕಚೇರಿಗಳಿಗೆ ಹೋಗಬಾರದು. ಆ ರೀತಿ ದೂರು ಹೋಗುವುದು ಸರಿಯಲ್ಲ. ಕೆಲವು ಗ್ರಾಮಗಳಲ್ಲಿ ಚಳುವಳಿ ಪ್ರಾರಂಭವಾಗಿ ರೈತರಿಗೆ ಹಿಂಸೆಯಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಮೊದಲು ಗಲಾಟೆ ಪ್ರಾರಂಭವಾಗಿ ಬಾಕಿ ಕಡೆಗೆ ಹರಡುತ್ತಿದೆ. ಆದರೆ ಯಾರದೂ ತಪ್ಪಿಲ್ಲ. ಕಾಲ ಆ ರೀತಿ ಬದಲಾವಣೆಯಾಗಿದೆ. ಆದ್ದರಿಂದ ಈ ರೀತಿಯ ಕಾನೂನನ್ನು ತರುವುದು ಜೋಡಿದಾರರಿಗೆ ಒಳ್ಳೆಯದು. ಶ್ರೀರಾಮಾಚಾರ್‌ರವರು ರೈತರ ಹಿತದೃಷ್ಟಿಯಿಂದಲೇ ಇದನ್ನು ಮಾಡಿದೆಯೆಂದು ಹೇಳಿದರು. ಈ ದಿವನ ಉತ್ತರ ಪ್ರದೇಶ, ಮದ್ರಾಸು, ಹೈದರಾಬಾದು ಮುಂತಾದ ಕಡೆಗಳಲ್ಲಿ ಆಗಲೇ ಈ ಸಂಬಂಧವಾದ ವ್ಯವಸ್ಥೆಯಾಗಿದೆ. ಕಾಶ್ಮೀರದಲ್ಲಿ ಪರಿಹಾರ ರೂಪವಾಗಿ ಒಂದು ಬಿಟ್ಟು ಕೂಡ ಕೊಟ್ಟಿಲ್ಲ. ಅಲ್ಲಿ ಜಮೀನನ್ನು ರೈತರಿಗೆ ಹಂಚಿದರು. ಹಾಗೆ ಇಲ್ಲೂ ಮಾಡಿದ್ದರೆ ಚೆನ್ನಾಗಿತ್ತು. ಆದರೆ ಮೈಸೂರು ದೇಶದಲ್ಲಿ ಮಾಡಿರುವ ರೀತಿ ಇಂಡಿಯಾದೇಶದ ಯಾವ ಪ್ರಾಂತದಲ್ಲೂ ಮಾಡಿಲ್ಲ. ಇಲ್ಲಿ ನಿಗದಿಮಾಡಿರುವಷ್ಟು ಪರಿಹಾರ ಇನ್ನೆಲ್ಲೂ ಇಲ್ಲ. ಇಲ್ಲಿ ಇನಾಂದಾರರಿಗೂ ಮೋಸ ಮಾಡಬಾರದು, ರೈತರಿಗೂ ಅನ್ಯಾಯವಾಗಬಾರದು. ಎಂದು ಮನಸ್ಸುಮಾಡಿ ಈ ಕಾನೂನನ್ನು ತಂದಿದ್ದಾರೆ ಕಷ್ಟಪಟ್ಟು ಸಂಪಾದನೆ ಮಾಡಿದವರ ಮತ್ತು ಶ್ರಮ ಪಟ್ಟು ಬೆಳೆದ ರೈತರ ಹಿತದೃಷ್ಟಿಗಳೆರಡನ್ನೂ ಗಮನಿಸಿ ಯಾರಿಗೂ ಅನ್ಯಾಯಮಾಡದಂತೆ ಏರ್ಪಾಡು ಮಾಡಿದ್ದಾರೆ. ಆದ್ದರಿಂದ ರೈತರ ಹಿತದೃಷ್ಟಿಯಿಂದ ಈ ಮನೋಡೆ ಬಂದಿದೆಯೆಂಬುದನ್ನು ಯಾರೂ ಒಪ್ಪುವುದಿಲ್ಲ.

ಇನ್ನೊಂದು ವಿಷಯ. ಇನಾಂತಿಗಳಲ್ಲಿ ಮಠ ಮತ್ತು ದೇವಸ್ಥಾನಗಳಿಗೆ ಸಂಬಂಧಪಟ್ಟ ಇನಾಂತಿಗಳು ಅನೇಕ ಇವೆ. ಬಹುಶಃ ಅವನ್ನು ಎಲ್ಲೂ ಸೇರಿಸಿಲ್ಲ, ರೆವೆನ್ಯೂ ಗ್ರಾಮಗಳಲ್ಲಿರುವ ಇನಾಂತಿಗಳು ಮತ್ತು un-alienated ಗ್ರಾಮಗಳಲ್ಲಿರುವ ಮಠಗಳಿಗೆ ಸಂಬಂಧಪಟ್ಟ ಇನಾಂತಿಗಳು ಕೆಲವಿವೆ. ಮಠಗಳಿಗೆ ಸಂಬಂಧಪಟ್ಟ ಅನೇಕ ಜಮೀನಿದೆ. ಹಿಂದೆ ಮಠಕ್ಕಾಗಿ ಬಿಟ್ಟಿದ್ದು ಸ್ವತ್ತು ಹೇಗೆ ಯಾರ ಕೈಗೋ ಸೇರಿದೆ. ಈಗ ಆ ಆಸ್ತಿಪಾಸ್ತಿಯು ವ್ಯರ್ಥವಾಗುತ್ತಿದೆ. ಕೋರ್ಟಾರ ಜಿಲ್ಲೆಯಲ್ಲಿ ಒಂದು ರೆವೆನ್ಯೂ ಗ್ರಾಮದಲ್ಲಿ ಅವ್ಯವಸ್ಥೆಯಾಗಿ ಅನೇಕ ಜಮೀನುಗಳು ಸಾಗಾಗುತ್ತಿಲ್ಲ. ಏಕೆಂದರೆ ಮಠದ ಅಧಿಕಾರಿಗಳು ಅರ್ಧ ವಾರ ಕೊಡಬೇಕೆಂದು ಹೇಳುತ್ತಾರೆ. ಆದರೆ ಪೂರ್ವದಿಂದ ಕೊಡುವ ಹಾಗೆ ಈಗ ಕೊಡುವುದಿಲ್ಲ ಎಂದು ರೈತರು ಹೇಳುತ್ತಾರೆ. ಹೀಗೆ ವ್ಯಾಜ್ಯ ಒಂದು ಅನೇಕ ಜಮೀನು ಪಾಳು ಬಿದ್ದಿದೆ. ಮಠವನ್ನು ಹಾಳುಮಾಡಬೇಕಾಗಿಲ್ಲ ಅಲ್ಲ ನ್ಯಾಯವಾಗಿ ಸರ್ವೆ ಸೆಟ್ಲ್‌ಮೆಂಟ್ ಆದಮೇಲೆ ಧಾಖಲಾಗುವ ಕಂದಾಯವನ್ನು ಮಠಕ್ಕೇ ಕೊಡಿ. ಅದೂ ಅಲ್ಲದೆ ಮಠದ ಅಧಿಕಾರಿಗಳಿಗೂ ಮತ್ತು ರೈತರಿಗೂ ತಿಕ್ಕಾಟವಾಗಿ ಹೆಚ್ಚು ಆಹಾರ ಬೆಳೆಯಲು ಧಕ್ಕೆ ಬರಬಾರದು. ಸುಮಾರು ಎರಡು ಸಾವಿರ ಹಳ್ಳಿಗಳಲ್ಲಿ ಅನೇಕ ಜಮೀನುಗಳು ಬಂಜರು ಬಿದ್ದಿವೆ. ಇದು ಸರಿಯಲ್ಲ, ವಾರ ಕೊಡಬೇಕು ಎಂದು ಜಮೀನ್ದಾರರು ಕೇಳುತ್ತಲೂ, ರೈತರು ಕೊಡುವುದಿಲ್ಲ ಎಂದು ಹೇಳು

ತ್ತಲೂ ವ್ಯಾಜ್ಯ ಮಾಡಿ ಅನೇಕ ಗ್ರಾಮಗಳಲ್ಲಿ ಜಮೀನನ್ನು ಸಾಗುಮಾಡದೆ ನಿಲ್ಲಿಸುವುದು ಸರಿಯಲ್ಲ. ಇದನ್ನು ತಿರ್ಮಾನ ಮಾಡಿ ರೈತರಿಗೆ ಜಮೀನನ್ನು ರಿಜಿಸ್ಟರು ಮಾಡಿ ಜೋಡಿದಾರರಿಗೆ ಪರಿಹಾರವನ್ನು ಕೊಡುವುದು ಸೂಕ್ತವಾಗಿದೆ. ಇದರ ಜೊತೆಗೆ ಖಾಸ್ ಜಮೀನು ಬೇರೆ ಸೇರುತ್ತದೆ. ಜೋಡಿದಾರರು ಪರಿಹಾರ ರೂಪವಾಗಿ ಬೇಕಾದಷ್ಟು ಹಣ ಪಡೆಯುವುದರಿಂದ ಬೆಂಗಳೂರು ಮೊದಲಾದ ಪಟ್ಟಣಗಳಿಗೆ ಬಂದು ಸುಖವಾಗಿ ಕಾರಿನಲ್ಲಿ ಓಡಾಡಿಕೊಂಡಿರಬಹುದು. ಆದ್ದರಿಂದ ರೈತರ ದೃಷ್ಟಿಯಿಂದ ಮಾತ್ರ ಕಾನೂನು ತಂದಿದೆ, ಇದರಿಂದ ಜೋಡಿದಾರರು ಕೆಟ್ಟುಹೋಗುತ್ತಾರೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ, ಈ ಮಸೂದೆಯನ್ನು ಜಾರಿಗೆ ತರುವುದರಿಂದ ರೈತರಿಗೂ ಒಳ್ಳೆಯದು, ಜೋಡಿದಾರರಿಗೂ ಒಳ್ಳೆಯದು ಮತ್ತು ಹೆಚ್ಚು ಆಹಾರವನ್ನೂ ಬೆಳೆಯಬಹುದು. ಬಹುದಿನದ ಹಿಂದೆಯೇ ಇದನ್ನು ಮಾಡಬೇಕಾದ್ದು ಸರ್ಕಾರದವರ ಕರ್ತವ್ಯವಾಗಿತ್ತು. ಇದನ್ನು ಜಾರಿಗೆ ತಂದರೆ ಆ ಕರ್ತವ್ಯವನ್ನು ಈಗ ನಿರ್ವಹಿಸಿದಂತಾಗುತ್ತದೆ. ಆದ್ದರಿಂದ ನಾನು ಇದನ್ನು ಸ್ವಾಗತಿಸುತ್ತೇನೆ.

ಶ್ರೀ ಎಸ್. ರಂಗರಾಯರು (ಚಿತ್ರದುರ್ಗ ಜಿಲ್ಲೆ).— ಈ ಮಸೂದೆಯನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ, ನಾನೂ ಒಬ್ಬ ಜೋಡೀದಾರ. ಆದ್ದರಿಂದ ಜೋಡೀದಾರರ ಅಭಿಪ್ರಾಯವನ್ನು ತಿಳಿಸುವುದು ನ್ಯಾಯವಾಗಿದೆ.

ಈಗ ನಮ್ಮ ಕಷ್ಟ ಹೇಗಿದೆಯೆಂದರೆ, ಜೋಡಿದಾರರ ಸ್ಥಿತಿಗತಿ ನೋಡಿಕೊಂಡು ಇಂಥಾ ಮಸೂದೆಯನ್ನು ತರುವುದಕ್ಕೆ ಏಕೆ ತಡವಾಯಿತ್ತಾರೋ ಎಂದು ಅನೇಕರಿಗೆ ಅನ್ನಿಸುತ್ತದೆ. ಕೆಲವು ಪ್ರಾಂತ್ಯಗಳಲ್ಲಿ ಇದು ಈ ಮೊದಲೇ ಜಾರಿಗೆ ಬಂದು, ಮದರಾಸಿನಲ್ಲಿ ಆಗಲೇ ಜೋಡಿದಾರರಿಗೆ ದುಡ್ಡು ಸಹ ಕೊಟ್ಟುಬಿಟ್ಟಿದ್ದಾರೆ. ನಮಗೆ ಮಾತ್ರ ಇನ್ನೂ ಇಲ್ಲ, ನಾವು ಏನು ಪಾಪ ಮಾಡಿದ್ದೆವೋ, ನಮ್ಮ ಮಂತ್ರಿಗಳು ಏಕೆ ನಮ್ಮನ್ನು ದ್ವಾರೋ ಎಂದು ನನಗೆ ಅನ್ನಿಸಿತು. ಮೊದಲಿಗೆ ಜೋಡೀದಾರರಿಗೂ ರೈತರಿಗೂ ಸೌಹಾರ್ದ ಚೆನ್ನಾಗಿತ್ತು. ಈಗಲೂ ಅನೇಕ ಗ್ರಾಮಗಳಲ್ಲಿ ಚೆನ್ನಾಗಿದೆ. ನಮ್ಮ ಗ್ರಾಮದಲ್ಲೂ ಚೆನ್ನಾಗಿನೆ ಎಂದು ಹೇಳಬಲ್ಲೆ. ಜೋಡಿದಾರ, ಜೋಡಿದಾರರಲ್ಲೇ ಕಿತ್ತಾಟ ಇರಬಹುದು. ಅನೇಕ ತೊಂದರೆಗಳಿವೆ. ಅನೇಕ ಸಣ್ಣ ಸಣ್ಣ ಜೋಡಿ ಗ್ರಾಮಗಳಲ್ಲಿ ಶ್ರ 16 32 ಜನ ಪಾಲುದಾರರಾಗಿ ವ್ಯಾಜ್ಯಗಳು ಬೇಕಾದಷ್ಟು ಇವೆ. ಹೀಗಿದ್ದು ರೈತರೂ, ಜೋಡಿದಾರರೂ ಇಬ್ಬರೇ ಅಲ್ಲದೆ ಮೂರನೆಯವರ ಚಿತಾವಣೆಯಿಂದ ಕೆಲವು ಗ್ರಾಮಗಳಲ್ಲಿ ಕಷ್ಟಗಳು ಉಂಟಾಗುತ್ತಾ ಇವೆ. ಮೂರನೆಯವರು ಎಂದರೆ ಸಾರ್ವಜನಿಕ ಮುಖಂಡರ ಚಿತಾವಣೆ ಇದ್ದೇ ಇದೆ. ತತ್ಪರಿಣಾಮವಾಗಿ ದೇಶದಲ್ಲಿ ಬದಲಾವಣೆಯಾಗುತ್ತಾ ಇದೆ. ಚಕ್ರವರ್ತಿಗಳ ಪದವಿಯು ಹೋಗುತ್ತಾ ಇದೆ. ಮಹಾರಾಜಾಧಿರಾಜರು ಅಧಿಕಾರ ಕಳೆದುಕೊಂಡರು. ಹೀಗಿರುವಾಗ ನಾವು ಸಣ್ಣ ಸಣ್ಣ ರಾಜರಂತೆ ಇದ್ದು ಖಾಯಂ ಆಗಿ ಇರಬೇಕೆಂದರೆ ಸಾಧ್ಯವಿಲ್ಲ. ನಮ್ಮದೂ ಹೋಗಬೇಕು. ಇವರ ಜೊತೆಗೆ ಇನ್ನೂ ಒಂದು ಮಸೂದೆ ಬರಬೇಕಾಗುತ್ತದೆ. Landlordism ಹೋಗಬೇಕಾಗುತ್ತದೆ. ನಾಲ್ಕಾರು ವರ್ಷಗಳಲ್ಲಿ the tiller of the soil will have to be the owner ಆಗುವ ಕಾಲ ಬಂದಾಗ ನಮಗೆ ಪರಿಹಾರ ಸಿಕ್ಕುವುದಿಲ್ಲ. ಈಗೇನೋ ಮೂಲಭೂತ ಹಕ್ಕು, ಕಾನ್ಸ್ಟಿಟ್ಯೂಷನ್ ಆಫ್ ಇಂಡಿಯಾ ಆಕ್ಟ್ ಇವೆಲ್ಲಾ ಇವೆ. ಈಗಲೇ ಸಹಾನುಭೂತಿಯಿಂದ ಜೋಡಿ ತೆಗೆದುಕೊಂಡು ರೈತರಿಗೂ ನಮಗೂ ಬಿಡುಗಡೆ ಮಾಡಿಸಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಈಗ ಅನೇಕ ಜೋಡಿ ಗ್ರಾಮಗಳಲ್ಲಿ ನಾನು ಕಂಡ ಹಾಗೆ ಜಮೀನು ಪಾಳುಬೀಳುವ ಸಂಭವ ವಿಶೇಷವಾಗಿದೆ. ಜೋಡಿದಾರರಿಗೂ ರೈತರಿಗೂ ಇರುವ ವ್ಯಾಜ್ಯದಿಂದಲೋ ಅಥವಾ ಅವರಿಗೂ ಇವರಿಗೂ ಇರುವ ಭಿನ್ನಾಭಿಪ್ರಾಯದಿಂದಲೋ ಜಮೀನು ಸಾಗುವಳಿಯಾಗುವುದು ಈಚೀಚೆಗೆ ಕಡಿಮೆಯಾಗುತ್ತಾ ಇದೆ. ಈಗ ಇದನ್ನು ರದ್ದು ಮಾಡಿ ರೈತರಿಗೆ ಜಮೀನಿನ ಮೇಲೆ ಹಕ್ಕು ಕೊಟ್ಟ ಪಕ್ಷದಲ್ಲಿ ಅವರಿಗೆ ಅದು ನನ್ನ ಜಮೀನು ಎಂಬ ಭಾವನೆ ಬಂದು ಹೆಚ್ಚು ಬೆಳೆ ಬೆಳೆಯುವ ಆಹಾರದ ಅಭಾವ ಹೋಗುವುದಕ್ಕೆ ಅವಕಾಶವಾಗುತ್ತದೆಂದು ನಂಬಿದ್ದೇನೆ. ಈಗ ಪರಿಹಾರ ಎಷ್ಟು ಕೊಡಬೇಕು, ಯಾವ ವಿಧಾನದಲ್ಲಿ ಕೊಡಬೇಕು, ಒಟ್ಟಿಗೆ ಕೊಡಲು ಸಾಧ್ಯವೇ ಅಥವಾ ಮದರಾಸಿನಲ್ಲಿ ಮಾಡಿದಂತೆ ಕಂತಿನ ಮೇಲೆ ಕೊಡಬೇಕಾಗುತ್ತದೆಯೇ ಎಂಬುದನ್ನೆಲ್ಲಾ ಯೋಚನೆ ಮಾಡಬೇಕಾಗುತ್ತದೆ. ಅದೂ ಅಲ್ಲದೆ ಮೊದಲಿನಿಂದಲೂ ಅನುಭವಿಸಿಕೊಂಡು ಬಂದಿರುವ ಹಕ್ಕನ್ನು ಕಿತ್ತುಕೊಳ್ಳುವಾಗ ನ್ಯಾಯವಾದ ರೀತಿಯಲ್ಲಿ ಪರಿಹಾರವನ್ನು ಕೊಡುವುದಕ್ಕೆ ಅನುಮತಿಸಿದರೆ ಒಳ್ಳೆಯದು. ಆದ್ದರಿಂದ ಇದು ಸೆಲೆಕ್ಟ್ ಸಮಿತಿಗೆ ಹೋಗುವುದು ಉಚಿತವೆಂದು ಹೇಳುತ್ತೇನೆ.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು—ರಿಟ್ರಾಸಿಡೆಡ್ ಪ್ರದೇಶ).—ಅಧ್ಯಕ್ಷರೇ, ನಾನು ಈ ಮಸೂದೆಯನ್ನು ಸ್ವಾಗತಿಸುತ್ತಾ ಎರಡು ಮಾತು ಮಾತನಾಡಬೇಕೆಂದಿದ್ದೇನೆ. ನಾನು ಜೋಡೀದಾರನೂ ಅಲ್ಲ, ಜಮೀನ್ದಾರನೂ ಅಲ್ಲ. ನನಗೆ ಕೊಂಚ ಜಮೀನಿದೆಯಾದರೂ ಅದನ್ನು ಪಾರಕ್ಕೋ. ಗುತ್ತಿಗೆಗೋ ಕೊಟ್ಟಿದ್ದೇನೆ. ಅವರು ಎಷ್ಟು ಕೊಡುತ್ತಾರೆಯೋ ಅಷ್ಟು ತೆಗೆದುಕೊಳ್ಳುತ್ತೇನೆ ಅಷ್ಟೆ. ಕಂದಾಯ ಕೂಡ ಅವರೇ ಕಟ್ಟಬೇಕು. ಹಳ್ಳಿಗರು ಬಹಳ ಸೋಮಾರಿಗಳಾಗಿದ್ದಾರೆ. ಪೂರ್ವದಲ್ಲಿ ಯಾವುದೋ ಒಂದು ಸೇವೆ ಸಲ್ಲಿಸಿದ್ದಕಾಗಿ ಜೋಡಿ ಗ್ರಾಮಗಳನ್ನು ಈಗಿನ ಜೋಡಿದಾರರ ಪೂರ್ವೀಕರಿಗೆ ಕೊಟ್ಟಿರಬೇಕು. ಆದರೆ ಆ ಜೋಡೀದಾರರುಗಳು ಈಗ ಹಳ್ಳಿಗಳಲ್ಲಿ ಇಲ್ಲದೆ ಪಟ್ಟಣಗಳಲ್ಲಿರುವುದರಿಂದ ಅಲ್ಲಿರುವ ರೈತರು ಸರಿಯಾಗಿ ಕೆಲಸಮಾಡುವುದಿಲ್ಲ. ಅದಕ್ಕೋಸ್ಕರವೇ ಜೋಡಿದಾರರೂ ಸಹ ಏನಾದರೂ ಪರಿಹಾರ ಸಿಕ್ಕರೆ ಸಾಕು ಅವುಗಳನ್ನು ಕೊಟ್ಟುಬಿಡೋಣ ಎಂದು ಇದ್ದಾರೆ. ನನ್ನ ಅಭಿಪ್ರಾಯದಲ್ಲ. ರೈತರು ಖಂಡಿತವಾಗಿಯೂ ಹಳ್ಳಿಗಳಲ್ಲಿ ಸರಿಯಾಗಿ ಕಷ್ಟಪಟ್ಟು ಕೆಲಸಮಾಡುವುದಿಲ್ಲ. ನಾನು ಎಷ್ಟೋ ಹಳ್ಳಿಗಳಲ್ಲಿ ನೋಡಿದ್ದೇನೆ. ಏಕೆಂದರೆ ಪಟ್ಟಣಗಳಿಗೆ ಹೋಗಿ ಕೂಲಿ ಕೆಲಸಮಾಡಿದರೆ ಒಂದು, ಒಂದೂವರೆ ರೂಪಾಯಿ ಕೂಲಿ ಸಿಕ್ಕುತ್ತದೆ, ಒಂದು ರೂಪಾಯಿ ಕೊಟ್ಟರೆ ಡಿಫೆನ್ಸ್‌ಮಿನಲ್ಲಿ 5 ಸೇರು ರಾಗಿ ಕೊಡುತ್ತಾರೆ, ಎರಡುದಿನ ಕಾಲ ಕಳೆಯುತ್ತೇವೆ ಎಂದು ಹೇಳುತ್ತಾರೆ. ಹಳ್ಳಿಗಳಲ್ಲಿ ಡಿಫೆನ್ಸ್‌ಗಳನ್ನು ಮಾಡಿರುವುದು ಒಂದು ತೊಂದರೆಯಾಗಿದೆ. ಇದು ನನ್ನ ಅನುಭವ. ಜಮೀನುಗಳನ್ನು ರೈತರಿಗೆ ಸ್ವಂತವಾಗಿ ಕೊಟ್ಟರೆ ಕಷ್ಟಪಟ್ಟು ಕೆಲಸಮಾಡುತ್ತಾರೆಂದು ಅನೇಕ ಜನಗಳು ಹೇಳುತ್ತಾರೆ, ಒಪ್ಪಿಕೊಳ್ಳುತ್ತೇನೆ. ಆದರೆ ನಾನು ತಿಳಿದುಕೊಂಡಿರುವುದು ಖಂಡಿತವಾಗಿಯೂ ಅವರು ಕೆಲಸ ಮಾಡುವುದಿಲ್ಲವೆಂದು. ಬೆಂಗಳೂರಿನ ಸುತ್ತಮುತ್ತಲೂ ಇರುವವರು ಮಾಡುವುದೇನೆಂದರೆ

(ಶ್ರೀ. ಬಿ. ಎಂ. ಶಾಮಣ್ಣಗೌಡರು).

ಪಟ್ಟಣಕ್ಕೆ ಓರುವುದು, ಕಾಫಿ ಹೋಟೆಲುಗಳಲ್ಲಿ ತಿನ್ನುವುದು, ಮನೆಯಲ್ಲಿ ಸುಖವಾಗಿ ಕುಳಿತು ಕೊಳ್ಳುವುದು, ಈ ರೀತಿ ಮಾಡುತ್ತಾರೆ. ಇದನ್ನು ನಾನು ನೋಡಿದ್ದೇನೆ. ಮಧ್ಯಾಹ್ನ 2 ಗಂಟೆಗೆ ಬಂದರೆ, ಒಂದುವೇಳೆ ಸಿನಿಮಾದಲ್ಲಿ ಟಿಕೆಟ್ಟು ಸಿಕ್ಕದಿದ್ದರೆ ರಾತ್ರಿ 10 ಗಂಟೆಯವರೆಗೂ ಇದ್ದು ಸಿನಿಮಾ ನೋಡಿಕೊಂಡು ಹೋಗುತ್ತಾರೆ. ಹೀಗಿರುವಾಗ ಈ ಮಸೂದೆಯನ್ನು ಜಾರಿ ಮಾಡುವುದರಿಂದ ಜೋಡೀದಾರರಿಗೆ ಅಷ್ಟಿಷ್ಟು ಪರಿಹಾರ ಸಿಕ್ಕುತ್ತದೆ, ರೈತರಿಗೆ ಜಮೀನಿನಮೇಲೆ ಸ್ವಾಮ್ಯತ್ವ ಬರುತ್ತದೆ, ಅಷ್ಟೇ ಹೊರತು ನಿಜವಾಗಿಯೂ ಹೆಚ್ಚು ಆಹಾರ ಬೆಳೆ ಬೆಳೆಯುವ ಯೋಜನೆಗೆ ಸಹಾಯವಾಗುತ್ತದೆ ಎಂಬ ನಂಬಿಕೆ ನನಗಂತೂ ಇಲ್ಲ. ಇದು ನನ್ನ ಸ್ವಂತ ಅಭಿಪ್ರಾಯ. ಏನೇ ಆಗಲೀ ಆ ರೀತಿ ಒಂದು ಮಸೂದೆ ತರಬೇಕು, ಜಮೀನ್‌ದಾರಿ ಪದ್ಧತಿ ಹೋಗಬೇಕು ಎಂದು ಹೇಳುವುದನ್ನು ಸ್ವಾಗತಿಸುತ್ತಾ ಶ್ಯಂಗೇರಿ ಒಂದನ್ನು ಬಿಟ್ಟು ಬಿಟ್ಟು ಮಿಕ್ಕೆಲ್ಲರಿಗೂ ಪರಿಹಾರ ಕೊಡಿ ಎಂದು ಹೇಳಿ ಇದು ಸೆಲೆಕ್ಟ್ ಸಮಿತಿಗೆ ಹೋಗಬಹುದೆಂದು ಸೂಚಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).— ಅಧ್ಯಕ್ಷರೇ, ಈ ಮಸೂದೆ ಸೆಲೆಕ್ಟ್ ಸಮಿತಿಗೆ ಹೋಗಬೇಕೆಂಬುದನ್ನು ನಾನು ಅನುಮೋದಿಸುತ್ತೇನೆ. ಆದರೆ ಶ್ರೀ ರಾಮಾಚಾರ್ಯರು ಯಾವ ಅಭಿಪ್ರಾಯದಿಂದ ಇದು ಸೆಲೆಕ್ಟ್ ಸಮಿತಿಗೆ ಹೋಗಬೇಕೆಂದು ಹೇಳಿದರೋ ಅದರಲ್ಲಿ ಮಾತ್ರ ನನ್ನ ಅಭಿಪ್ರಾಯ ಬೇರೆ ರೀತಿಯಾಗಿದೆ ಎಂದು ಹೇಳಬೇಕಾಗಿದೆ. ಮುಖ್ಯವಾಗಿ ಈಗ ನಮ್ಮ ದೇಶದಲ್ಲಿ ಭೂಮಿಯ ಒಡೆತನವೆಲ್ಲಾ ಏಕ ಮುಖವಾಗಿಲ್ಲ. ಒಂದೇ ರೀತಿಯ ಪದ್ಧತಿ ಇಲ್ಲ; ಅದನ್ನು ಅಷ್ಟು ಜಾಗ್ರತೆ ಸಾಧಿಸಬೇಕಾದ್ದು ಒಂದು ಮುಖ್ಯವಾದ ಗುರಿಯಾಗಿರಬೇಕೆಂದು ನನ್ನ ಅಭಿಪ್ರಾಯ. ಈಗ ಗ್ರಾಮಗಳಲ್ಲಿ ಏನಾದರೂ ಒಂದು ಅಭಿವೃದ್ಧಿ ಕಾರ್ಯ ಮಾಡಬೇಕೆಂದರೆ ಸಾಧ್ಯವಾಗುತ್ತಾ ಇಲ್ಲ. ಒಂದು ಕೆರೆ, ಕಟ್ಟೆ ಆಗಬೇಕಾದರೆ ಇನಾಂದಾರರು ಒಪ್ಪಬೇಕು; ರೈತರು ಒಪ್ಪಬೇಕು. ಇನಾಂದಾರರು ಅಯ್ಯಾಯ ಗ್ರಾಮಗಳಲ್ಲಿ ಇರುವುದೇ ಇಲ್ಲ. ಇದರಿಂದ ರೈತರ ಹಿತಕ್ಕೆ ತೊಂದರೆಯಾಗುತ್ತಿದೆ. ಅಲ್ಲದೆ ಯಾವುದಾದರೂ ಒಂದು ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾದರೆ ಅನೇಕ ತಕರಾರುಗಳು ಇರುತ್ತವೆ. ಸಾರ್ವಜನಿಕ ಕಾರ್ಯ ನಡೆಯುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಇದು ಒಂದು ಅಂಶ. ನನ್ನ ಅಭಿಪ್ರಾಯದಲ್ಲಿ ಭೂಮಿಯ ಸ್ವಾಮ್ಯತ್ವ ಯಾವಾಗಲೂ ಕೂಡ ಸರ್ಕಾರದವರಲ್ಲಿಬೇಕೇ ಹೊರತು ಬೇರೆಯವರ ಕೈಯಲ್ಲಿರುವುದು ಸರಿಯಿಲ್ಲ. ಸೆಲೆಕ್ಟ್ ಸಮಿತಿಯವರ ಗಮನಕ್ಕೆ ಒಂದು ವಿಚಾರವನ್ನು ಸೂಚಿಸಬಯಸುತ್ತೇನೆ. ಇದು ನಮ್ಮ ಮಾನ್ಯ ಸಚಿವರು ತಿಳಿಸಿರುವಂತೆ ಇನಾಂ ಗ್ರಾಮಗಳಿಗೆ ಮಾತ್ರ ಇದು ಅನ್ವಯಿಸುತ್ತದೆ, ಇತರ ಗ್ರಾಮಗಳಲ್ಲಿರತಕ್ಕ ಚಿಕ್ಕ ಚಿಕ್ಕ ಜೋಡಿ ಇನಾಂಗಳಿಗೆ ಅನ್ವಯಿಸುವುದಿಲ್ಲ. ಆ ಜಮೀನುಗಳೆಲ್ಲಾ ಇವತ್ತು ಪಾಳುಬಿದ್ದಿವೆ. ಅದನ್ನು ಯಾರೂ ಸಾಗುವಳಿ ಮಾಡುತ್ತಿಲ್ಲ. ಒಂದುಪಕ್ಷ ಸರ್ಕಾರದವರೇ ಮುಂದೆ ಬಂದು ಹರಾಜುಮಾಡಿದರೂ ಸಹ ಯಾರಾದರೂ ಒಬ್ಬಬ್ಬರು ಬಂದು ತಕರಾರು ಹಾಕುತ್ತಾರೆ. ಹೀಗಾಗಿ ನೂರಾರು ವರ್ಷಗಳಿಂದ ಅನೇಕ ಜಮೀನುಗಳು ಪಾಳುಬಿದ್ದಿವೆ, ಪ್ರಯೋಜನವನ್ನು ಹೊಂದುವುದಕ್ಕೆ ಆಗುತ್ತಾ ಇಲ್ಲ. ಈ ಮಸೂದೆ ಇಷ್ಟುದಿನ ಏಕೆ ತಡವಾಯಿತು ಎಂದು ನನಗೆ ಆಶ್ಚರ್ಯವಾಯಿತು. ಈಗಾಗಲೇ ಈ ಸರ್ಕಾರ ಬಂದು ಮೂರು ವರ್ಷವಾಯಿತು ಇದಕ್ಕಾಗಿ ಒಂದು ಸಮಿತಿಯನ್ನೂ ಸಹ ಮಾಡಿದ್ದು ಈಗ ಈ ಮಸೂದೆ ಬಂದಿದೆ. ಸೆಲೆಕ್ಟ್ ಸಮಿತಿಗೆ ಹೋಗುವುದಾಗಿದೆ. ಪುನಃ ಈ ಮಸೂದೆ ಅಂಗೀಕಾರವಾಗುವುದಕ್ಕೆ ಮುಂಚೆ ಈ ಸಭೆ ಬಹುಶಃ ಹೋಗಿ ಚುನಾವಣೆ ನಡೆದು ಬೇರೆ ಸಭೆ ಬರುತ್ತದೆಯೋ ಏನೋ ಎಂದು ನನಗೆ ಅನುಮಾನವಿದೆ. ಅವರು ಈ ಮಂತ್ರಿಮಂಡಲದವರು ಹೋಗುವುದರೊಳಗೆ ಖಂಡಿತ ಸಾಧ್ಯವಿಲ್ಲವೆಂದು ಕಾಣುತ್ತೆ. ಇದನ್ನು ನೋಡಿದರೆ ತಾವು ನಿಜವಾಗಿಯೂ ಈ ಮಸೂದೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಮನಸ್ಸಿಟ್ಟುಕೊಂಡು ತಾವಿದನ್ನು ತಂದಿಲ್ಲವೆಂದೇ ನನಗೆ ತೋರುತ್ತದೆ. ಏಕೆಂದರೆ ಇದು ಪೂರ್ತಿಯಾಗಿ ಜಾರಿಗೆ ಬರುವುದಕ್ಕೆ ಮಧ್ಯೆ ಅನೇಕ ಅಡಚಣೆಗಳು ಬರಬಹುದು. ಈ ಜೋಡಿ ಇನಾಂತಿಗಳ ವಿಷಯದಲ್ಲಿ ಎಷ್ಟು ವ್ಯವಹಾರಗಳಿರುತ್ತವೆಯೆಂಬುದನ್ನು ನೀವೇ ನೋಡಿ. ಕೋರ್ಟುಗಳಲ್ಲಿ ಬರುವ ಕೇಸುಗಳಲ್ಲಿ ಸುಮಾರು 50 ಪಾಲು ಇಂಥಾ ಜೋಡಿ ಇನಾಂತಿಗಳಿಗೆ ಸೇರಿದ್ದೇ ಆಗಿರುತ್ತದೆ. ಒಂದೊಂದು ಜೋಡಿ ಗ್ರಾಮದಲ್ಲೂ ಕೂಡ ಒಂದಾಣೆ ಪಾಲಿನವರು, ಎರಡಾಣೆ ಪಾಲಿನವರು ಎಂಟು ಆಣೆ ಪಾಲಿನವರು ಎಂದು ನಾನಾ ರೀತಿಯಲ್ಲಿರುತ್ತಾರೆ. ಒಬ್ಬರು ಇತ್ತಕಡೆ, ಇನ್ನೊಬ್ಬರು ಅತ್ತಕಡೆ ಎಂದು ಕೋರ್ಟಿಗೆ ಹೋಗಿ, ಕೊನೆಗೆ ಒಟ್ಟಿನಲ್ಲಿ ರೈತನ ಮನೆ ಹಾಳಾಗಿಹೋಗುತ್ತದೆ. ಆದ್ದರಿಂದ ಇಂಥಾ ಮಸೂದೆಯನ್ನು ಎಷ್ಟುಮಟ್ಟಿಗೆ ಜಾಗ್ರತೆ ಪಡಿಸಬೇಕಾದ ಅಗತ್ಯವಿದೆಯೆಂಬುದನ್ನು ನಾನು ಹೇಳಬೇಕಾಗಿಲ್ಲ.

ಒಂದು ವಿಧದಲ್ಲಿ ಇನಾಂದಾರರ ದೃಷ್ಟಿಯಿಂದಲೂ ಈ ಮಸೂದೆ ಬಹಳ ಮುಖ್ಯ. ಅನೇಕಕಡೆ ರೈತರುಗಳಿಂದ ಇನಾಂದಾರರುಗಳಿಗೆ ಒಂದು ಕಾಸೂ ಕೂಡ ಬರುತ್ತಿಲ್ಲ. ಸರ್ಕಾರದವರು ಬಂದು ಆ ಕಂದಾಯ ವನ್ನೇನೂ ವಸೂಲುಮಾಡಿಕೊಡುತ್ತಿಲ್ಲ. ಹೀಗಾಗಿ ಅಂಥಾ ಇನಾಂದಾರರು ಸದ್ಯ ಈ ಮಸೂದೆ ಬಂದರೆ ಸಾಕೆಂದು ಕಾಯುತ್ತಿದ್ದಾರೆ. ಅಷ್ಟೂ ಈಗಿರುವ ಕಾನೂನಿನಲ್ಲಿ ಜಮೀನಿಗೆ ಪರಿಹಾರ ಕೊಟ್ಟು ಅದನ್ನು ತೆಗೆದುಕೊಳ್ಳಬೇಕೆಂದು ವಿಧಾಯಕವಾಗಿದೆ. ಮುಂದೆ ಇನ್ನೂ ಹತ್ತಾರು ವರ್ಷಗಳು ಹೋಯಿತೆಂದರೆ ಯಾವ ಪರಿಹಾರವನ್ನೂ ಕೊಡದೆ ತೆಗೆದುಕೊಳ್ಳಬಹುದೆಂದು ಕಾನೂನಾಗಬಹುದು. ಆದ್ದರಿಂದ ಎಲ್ಲರೂ ಉಭಯತ್ರರ ದೃಷ್ಟಿಯಿಂದ ಇಂಥಾ ವ್ಯವಸ್ಥೆಯನ್ನು ಈಗಾಗಲೇ ಮಾಡಿದರೆ ದೇಶದಲ್ಲಿ ಎಲ್ಲಾ ಕಡೆಯೂ ಏಕರೀತಿಯಾದ Land tenancy ಪದ್ಧತಿ ಬಂದಂತಾಗುತ್ತದೆ. ಜೋಡಿದಾರರಿಗೂ ತಮ್ಮ ಜೋಡಿಗೆ ತಕ್ಕ ಪರಿಹಾರ ತೊರೆಯುತ್ತದೆ. ರೈತರಿಗೂ ಕೂಡ ತಮ್ಮ ಜಮೀನು ತಮ್ಮದೇ ಆಯಿತೆಂದೆನಿಸುತ್ತದೆ. ಇನ್ಯಾರೂ ಅದನ್ನು ಕೇಳುವುದಕ್ಕೆ ಬರುವಂತಿಲ್ಲವೆಂಬ ಸಮಾಧಾನ ಅವನಲ್ಲುಂಟಾಗುತ್ತದೆ. ಆದ್ದರಿಂದ ಈ ಮಸೂದೆಯನ್ನು ಅದಷ್ಟು ಜಾಗ್ರತೆ ಪಾನು ಮಾಡಬೇಕಾದ ಅಗತ್ಯವಿದೆ. ಇಲ್ಲಿ ಅಲ್ಲಿ ಇರತಕ್ಕ ಕೆಲವು ದೋಷಪೂರ್ಣಗಳನ್ನು ಸೆಲೆಕ್ಟ್ ಸಮಿತಿಯವರು ಕೂಲಂಕಷವಾಗಿ ಪರಿಶೀಲಿಸಿ ಸರಿಮಾಡುತ್ತಾರೆಂದು ನಂಬಿದ್ದೇನೆ. ಇದೇ ಸಂದರ್ಭದಲ್ಲಿ ಇತರ ಗ್ರಾಮಗಳಲ್ಲಿರುವ ಎಲ್ಲಾ ಜೋಡಿ ಮತ್ತು ಇನಾಂ ಜಮೀನುಗಳಿಗೂ ಈ ಮಸೂದೆ ಅನ್ವಯಿಸುವಂತೆ ಮಾಡಬೇಕೆಂದು ನನ್ನ ಸೂಚನೆ. ಮುಖ್ಯವಾಗಿ ಸೆಲೆಕ್ಟ್ ಸಮಿತಿಯವರೂ ಅದಷ್ಟು ಜಾಗ್ರತೆ ಈ ಮಸೂದೆಯನ್ನು

ಪರಿಶೀಲನೆಮಾಡಿ ಈ ಸಭೆಯ ಅವಗಾಹನೆಗೆ ತರ ಲೆಂದು ಆಶಿಸುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಆಧ್ಯಕ್ಷರೇ.....

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತಾವು ಯಾರ ಪರ, ಜೋಡಿದಾರರ ಪರವೇ ಅಥವಾ ರೈತರ ಪರವೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ನ್ಯಾಯದ ಪರ.

ಮಾನ್ಯ ಅಧ್ಯಕ್ಷರೇ, ಈ ಇನಾಂ ಗ್ರಾಮಗಳ ಹಕ್ಕನ್ನು ಸರ್ಕಾರವು ತೆಗೆದುಕೊಳ್ಳಬೇಕೆಂಬ ವಿಚಾರ ಇವತ್ತಿನ ವಿಚಾರ ಮಾತ್ರವಲ್ಲ. ಬಹಳ ವರ್ಷಗಳಿಂದ ನ್ಯಾಯ ವಿಧಾಯಕ ಸಭೆಯಲ್ಲೂ, ಪ್ರಜಾಪ್ರತಿನಿಧಿಸಭೆಯಲ್ಲೂ ಒತ್ತಾಯಪಡಿಸಲಾಗಿದೆ. ಇದರ ಮುಖ್ಯ ತತ್ವ, ಸರ್ಕಾರಕ್ಕೂ ಮತ್ತು ಭೂಮಿಯ ಒಡೆಯನಿಗೂ ಮಧ್ಯೆ ಒಂದು ಸಬ್ಸಿಡಿಯರಿ ಸರ್ಕಾರ ಇರಬಾರದು ಎಂಬುದು. ಅದು ಹೊರತು ಇದರಿಂದ ನಿಮ್ಮ ಆಹಾರ ಪಟ್ಟಿಸುವ ಯೋಜನೆ ಶೀಘ್ರವಾಗಿ ಫಲಸಿ ಬಿಡುತ್ತದೆಂದು ಯಾರಾ ದರೂ ನಂಬಿದ್ದರೆ ಅದು ಖಂಡಿತ ತಪ್ಪು ಎಂದು ನಾನು ಹೇಳುತ್ತೇನೆ.

ಭೂಮಿಯ ಒಡೆಯನಿಗೂ ಮತ್ತು ಸರ್ಕಾರಕ್ಕೂ ನೇರವಾದ ಸಂಬಂಧವಿರಬೇಕೇ ವಿನಾ ಮಧ್ಯೆ ಯಾರೂ ಇರಬಾರದೆಂಬ ತತ್ವ ಬಹಳ ಒಳ್ಳೆಯದೆಂಬುದನ್ನು ಎಲ್ಲರೂ ಬಿಪ್ಪಿಕೊಳ್ಳಬೇಕು. ಆದ್ದರಿಂದಲೇ ನಾನು ಕೂಡ ಲ್ಯಾಂಡ್ ರೆವೆನ್ಯೂ ಪಾಲಸಿ ಸಮಿತಿಯ ಸದಸ್ಯನಾ ಗಿದ್ದಾಗ ಇದು ಅಗತ್ಯವಾಗಿ ಆಗಬೇಕೆಂದು ಒತ್ತಾಯ ಪಡಿಸಿದೆ. ಇನಾಂದಾರರ ಹಕ್ಕನ್ನು ನಾವು ತೆಗೆದು ಕೊಳ್ಳುವಾಗ ಅದನ್ನು ಪುಕಸಟ್ಟೆ ತೆಗೆದುಕೊಂಡು ಬಡ ಬೇಕೇ ಅಥವಾ ದುಡ್ಡುಕೊಟ್ಟು ತೆಗೆದುಕೊಳ್ಳಬೇಕೇ ಎಂಬ ಪ್ರಶ್ನೆ ನಮ್ಮ ಮುಂದೆ ಬಂತು. ಆದರೆ ದೇವರ ದಯದಿಂದ ದುಡ್ಡು ಕೊಡದೆ ಕಿತ್ತುಕೊಳ್ಳುವ ಅಧಿಕಾರ ವನ್ನು ನಮ್ಮ ರಾಜ್ಯಾಂಗ ಶಾಸನದಲ್ಲಿ ಕೊಡಲಿಲ್ಲ. ಒಂದು ವೇಳೆ ಆ ಅಧಿಕಾರ ಕೊಟ್ಟಿದ್ದರೆ ಈ ಜೋಡಿ ದಾರರ ಮತ್ತು ಇನಾಂದಾರರ ಪರಿಣಾಮವೇನಾಗು ತ್ತಿತ್ತೋ ಗೊತ್ತಿಲ್ಲ.

ಅಂತು ಈಗ ಆ ಪರಿಸ್ಥಿತಿ ಇಲ್ಲ. ಅಂದ ಮೇಲೆ, ಪರಿಹಾರ ಕೊಡಬೇಕೆಂದರೆ, ಎಷ್ಟು ಕೊಡಬೇಕು, ಯಾವ ಆಧಾರದ ಮೇಲೆ ಕೊಡಬೇಕು ಮತ್ತು ಯಾವ ಕಾಲ ದಲ್ಲಿ ಕೊಡಬೇಕು ಇತ್ಯಾದಿ ಇತ್ಯಾದಿ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾದ್ದು ಅಗತ್ಯ. ಈ ಸಂದರ್ಭದಲ್ಲಿ ನಾವು ಒಂದಂಶವನ್ನು ಮನಸ್ಸಿಗೆ ತಂದುಕೊಳ್ಳಬೇಕು. ಈ ದಿನ ಜೋಡಿದಾರರುಗಳು, ಮತ್ತು ಇನಾಂದಾರರುಗಳು ಅಷ್ಟೈಶ್ವರ್ಯದಿಂದ ಕುಣಿ ದಾಡುತ್ತಿದ್ದಾರೆಂದು ಯಾರಾದರೂ ಭಾವಿಸಿದ್ದರೆ ಅದು ಖಂಡಿತ ಸತ್ಯಕ್ಕೆ ದೂರವಾದ ಮಾತು. ಒಂದು ವೇಳೆ ಕೆಲವರು ಅಷ್ಟಿಷ್ಟು ಹೆಚ್ಚಿಗೆ ಹಣ ಸಂಪಾದನೆ ಮಾಡಿ ದ್ದರೂ ಅದು ಈ ಭೂಮಿಯಿಂದಲೇ ಮಾಡಿದ್ದಾರೆಂದು ನಾನು ನಂಬುವುದಿಲ್ಲ. ದೊಡ್ಡ ದೊಡ್ಡ ಲಾಯರು ಗಳಾಗಿಯೋ ಅಥವಾ ಇನ್ನಾವುದಾದರೂ ಸುಲಭವಾದ ವ್ಯವಹಾರದಿಂದ ಹಣ ಸಂಪಾದನೆ ಮಾಡುವ ಮಾರ್ಗ ಗಳಿಂದ ಈ ಐಶ್ವರ್ಯವನ್ನು ಸಂಪಾದನೆ ಮಾಡಿ ಕೊಂಡಿರಬಹುದು, ಅಷ್ಟೇ ಹೊರತು ಭೂಮಿಯಿಂದ ಏಂದಿದೆಯೆಂದು ನಂಬುವುದು ಕಷ್ಟ. ಒಟ್ಟಿನಲ್ಲಿ ಅವರು ಗಳಲ್ಲೂ ಬಡವರೇ ಹೆಚ್ಚಾಗಿದ್ದಾರೆಂಬದನ್ನು ಈ ಸಭೆಯ ನವು ಗಮನಿಸಬೇಕು. ಆದ್ದರಿಂದ ನಾವು ಕೊಡುವ ನುಡ್ಡನ್ನು ಆದಷ್ಟು ಬೇಗನೆ ಕೊಟ್ಟರೆ, ಅವರು ಅದನ್ನೇ ಜೀರೆ ಎರ್ಲಾದರೂ ಇಟ್ಟು ರೂಢಿಸಿಕೊಂಡು ಜೀವಿಸ ಬಹುದು. ಇದರಲ್ಲಿ ಎಷ್ಟೋ ಜನ ವಿಧವೆಯರೂ ಬಾಲಕರೂ ಇದ್ದಾರೆ. ಅವರಿಗೆ ಇದರಿಂದ ಅನುಕೂಲ ವಾಗಬೇಕಾದರೆ, ಅವರ ಆಸ್ತಿಪಾಸ್ತಿಗಳನ್ನು ಕಿತ್ತು ಕೊಂಡ ಕೂಡಲೇ ಪರಿಹಾರ ಹಣವನ್ನೂ ಕೊಟ್ಟು ಬಿಡಬೇಕು. ಇದಕ್ಕೆ ಸರಿಯಾದ ನಿಯಮವನ್ನು ಮಾಡಿಲ್ಲ. 23ನೆಯ ಕ್ಲಾಸ್‌ನಲ್ಲಿ ಈ ರೀತಿ ಹೇಳಿದೆ :

"The compensation..... ..may be paid in such form and manner and at such time or times, and in one or more instalments, as may be prescribed by rules made by the Government."

ಸ್ವಲ್ಪ ಮಟ್ಟಿಗೆ ಕಡ್ಡಾಯವಾಗಿ ಇಷ್ಟು ದಿವಸಗಳಲ್ಲೇ ಕೊಟ್ಟು ಬಿಡಬೇಕೆಂದು ಆರ್ಡರ್ ಬರುವ ರೀತಿಯಲ್ಲಿ ಬದ ಲಾವಣೆ ಮಾಡುವುದು ಅಗತ್ಯ. ಆದರಲ್ಲೂ ಹೆಚ್ಚು ದಿವಸ ಕೊಡುವುದನ್ನು ನಾನು ಅಷ್ಟಾಗಿ ಒಪ್ಪಲಾರೆ. ಒಂದು ಪದಾರ್ಥವನ್ನು ಅವರಿಂದ ತೆಗೆದುಕೊಂಡ ಮೇಲೆ ಕೂಡಲೆ ಅವರಿಗೆ ನಲ್ಲಬೇಕಾದ ಹಣವನ್ನೂ ಕೊಟ್ಟುಬಿಡಬೇಕು. ಈ ಅಂಶವನ್ನು ಸೆಲೆಕ್ಟ್ ಸಮಿತಿ ಯವರು ಗಮನಿಸಬೇಕಾದ್ದು ಅವರ ಕರ್ತವ್ಯ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನಗದಾಗಿಯೇ ಕೊಡಬೇಕೆಂದು ಹೇಳುತ್ತೀರಾ?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ದೊಡ್ಡ ದೊಡ್ಡ ಹಣವಂತರಿಗೆ ಅಂದರೆ ಬ್ಯಾಂಕ್ ಕಾರುಗಳಲ್ಲಿ ಓಡಾಡುವಂಥವರಿಗೆ ಬಾಂಡುಗಳನ್ನು ಕೊಡಬಹುದು. ಮಿಕ್ಕವರಿಗೆ ಎಡಗೈಯಲ್ಲಿ ಭೂಮಿ, ಬಲಗೈಯಲ್ಲಿ ದುಡ್ಡು ಎನ್ನುವಂತೆ ಕೊಡಬೇಕೆಂದು ನನ್ನ ಸಲಹೆ. ಹಾಗೆ ಮಾಡದಿದ್ದರೆ ಅನೇಕರಿಗೆ ಬಹಳ ತೊಂದರೆಯಾಗುತ್ತ ದೆಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಇನ್ನು 'ಖಾಸ್' ಭೂಮಿಯ ವಿಷಯ, ಪರಿಶೀಲಿಸ ಬೇಕು. ಖಾಸ್ ಜಮೀನೆಂದರೆ ಜೋಡಿದಾರನೇ ಸ್ವತಃ ಹಿಂದಿನ ಆರು ವರ್ಷಗಳಿಂದ ವ್ಯವಸಾಯ ಮಾಡಿಸುತ್ತಿ ರುವ ಭೂಮಿ ಎಂದು ಇಲ್ಲಿ ಅರ್ಥ ವಿವರಣೆಯಲ್ಲಿ ಹೇಳಿದೆ. ಭೂಮಿಯಲ್ಲಿ ಒಡೆತನದ ವಿಷಯದಲ್ಲಿ ಅನೇಕ ವಿಷಯ ಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಜೋಡಿದಾರ ತಾನೇ ಮಾಡುತ್ತಿದ್ದ ಜಮೀನುಗಳನ್ನು ವಾರಕ್ಕೊ ಗುತ್ತಿಗೆಗೋ ಕೊಟ್ಟು ಸಾಗು ಮಾಡಿಸಿಕೊಂಡು ಬರು ತ್ತಿರಬಹುದು. ಅಂಥಾದ್ದರಲ್ಲಿ ಆತನು ಕಳೆದ 6 ವರ್ಷ ಗಳಿಂದ ಜಮೀನನು ನ್ಯಂತವಾಗಿ ಸಾಗು ಮಾಡಿಸಿಲ್ಲ ವೆಂದು ಹೇಳುವುದು ಸರಿಯಲ್ಲ. ಒಂದು ವೇಳೆ ಯಾವು ದಾದರೂ ಜಮೀನನ್ನು ತನ್ನ ಸ್ವಂತ ಮೇಹನತ್ತಿನಿಂದ ಉತ್ಕೃಷ್ಟವಾಗಿ ಮಾಡಿ ವಾರಕ್ಕೋ ಗುತ್ತಿಗೆಗೋ ಆರು ವರ್ಷಕಾಲ ಕೊಟ್ಟಿದ್ದರೆ, ಈ ಬಲ್ಲನ ಪ್ರಕಾರ ಆ ಜಮೀನು ಮಾಡುತ್ತಿರುವವನೇ quasi permanent tenant ಆಗಿದ್ದಾನೆಂದು ಹೇಳಿದರೆ ಸ್ವಲ್ಪ ಮಟ್ಟಿಗೆ ನ್ಯಾಯಕ್ಕೆ ದೋಷವಿದೆಯೆಂದು ಹೇಳದೆ ವಿಧಿಯಿಲ್ಲ. ಅಲ್ಲದೆ ನೀವು ಖಾಸ್ ಭೂಮಿಯನ್ನು ಇನಾಂದಾರನೇ ಇಟ್ಟುಕೊಳ್ಳಬಹುದೆಂದು ಹೇಳಿದರೂ ಸಹ ಅನೇಕರಿಗೆ ಖಾಸ್ ಭೂಮಿ ಇಲ್ಲದೆ ಇದ್ದರೂ ಇರಬಹುದು. ಅಂಥ ಸಂದರ್ಭದಲ್ಲಿ ಯಾವನಾದರೂ ಇನಾಂದಾರನು ತನ್ನ ಇನಾಂತ್ ಜಮೀನನ್ನು ಸರ್ಕಾರಕ್ಕೆ ಕೊಡುವಾಗ ತಾನೇ ಸ್ವಲ್ಪ ಜಮೀನನ್ನು ಪಡೆದು ಕೃಷಿ ಉದ್ಯೋಗವನ್ನು ಬಡಾವಣೆ ಮಾಡಬೇಕೆಂದು ಅಪೇಕ್ಷೆಪಟ್ಟರೆ ಅವ ನಿಗೆ ಜಮೀನು ಬಿಟ್ಟುಕೊಡುವ ವ್ಯವಸ್ಥೆ ಇಲ್ಲಲ್ಲ.

*ಈಗ ಇನಾಂ ಹಕ್ಕನ್ನು ಅವರಿಂದ ತೆಗೆದುಕೊಳ್ಳುತ್ತಿ ದ್ದೇವೆಯೇ ವಿನಾ ಭೂಮಿಯನ್ನಲ್ಲ. ಈ ವಿಚಾರವನ್ನು ಸೆಲೆಕ್ಟ್ ಸಮಿತಿಯವರು ಪರಿಶೀಲಿಸಬೇಕು. ಪರಿಹಾರ

(ಶ್ರೀ ಎಚ್. ಎಂ. ಚನ್ನಬಸಪ್ಪನವರು).

ಕೊಡುವುದು ಇನಾಂ ಹಕ್ಕಿಗೆ ಮಾತ್ರ ಕೊಡತಕ್ಕ ಬೆಲೆಯೇ ವಿನಾ ಭೂಮಿಗಾಗಿ ಕೊಡತಕ್ಕುದಲ್ಲ. ಇನಾಂದಾರನು ನಲವತ್ತು ಐವತ್ತು ಎಕರೆ ಜಮೀನನ್ನು ತಾನೇ ಇಟ್ಟುಕೊಂಡು ವ್ಯವಸಾಯ ಮಾಡಬೇಕೆಂಬ ಆಸೆಯಿದ್ದರೆ ಆತನಿಗೆ ಜಮೀನು ಕೊಡುವುದು ನ್ಯಾಯ ಮತ್ತು ಧರ್ಮ. ಇದಕ್ಕೆ ಈ ಮಸೂದೆಯಲ್ಲಿ ಎಲ್ಲಿಯೂ ಅವಕಾಶವಿಲ್ಲ. ಹಾಗೆ ಬಿಟ್ಟುಕೊಡದೆ ಸ್ವಂತ ಜಮೀನು ಎಷ್ಟಿದೆಯೋ ಅದನ್ನು ಮಾತ್ರ ಇಟ್ಟು ಕೊಳ್ಳಬಹುದು ಮಿಕ್ಕದ್ದಕ್ಕೆ ಹಣ ತೆಗೆದುಕೊಂಡು ಹೋಗು ಎಂದು ಇನಾಂದಾರನಿಗೆ ಹೇಳಿದರೆ ಅದು ನ್ಯಾಯ ವಿರುದ್ಧವಾಗುತ್ತದೆ. ನ್ಯಾಯವಾಗಿ ಅವನಿಗೆ ಎಷ್ಟು ಜಮೀನು ಬಿಟ್ಟುಕೊಡಬೇಕು ಎಂಬುದು ವಿವರಕ್ಕೆ ಸಂಬಂಧಿಸಿದ ವಿಷಯ ಈ ಅಂಶವನ್ನೂ ಸೆಲೆಕ್ಟ್ ಸಮಿತಿಯವರು ಪರಿಶೀಲಿಸಬೇಕು.

Quasi permanent tenant ಆದವನು ಆರು ವರ್ಷ ಇದ್ದುಕೊಂಡು ಜಮೀನು ಮಾಡಿದ್ದಾನೆಂದ ಮಾತ್ರಕ್ಕೇ ಅವನು ಇನಾಂದಾರನಿಗೆ ವರ್ಷವರ್ಷವೂ ಕೊಡುತ್ತಿದ್ದುದರ ಹತ್ತರಷ್ಟು ಕೊಟ್ಟರೆ ಜಮೀನಿನ ಮೇಲೆ ಸ್ವಾಮ್ಯಬರುತ್ತದೆಂದರೆ ಇದು ನ್ಯಾಯವಲ್ಲ. ಸಾಮಾನ್ಯವಾಗಿ ಆ ಭೂಮಿಗೆ ಆಗುವ ಖರೀದಿಯನ್ನು ಕೊಟ್ಟರೆ ಅದನ್ನು quasi permanent tenantಗೆ ಕೊಡಬಹುದೇ ವಿನಾ ಹತ್ತು ವರ್ಷದ ಉತ್ತ ತ್ತಿ, ಎಂದರೆ ನುವಾರು ಹತ್ತು ಪಲ್ಲ ಬತ್ತ, ಎಂದರೆ 200 ರೂಪಾಯಿ ಗೊತ್ತುಮಾಡಿ ಅದನ್ನು ಕೊಟ್ಟರೆ ಸ್ವಾಮ್ಯವನ್ನು ಕೊಡುವುದು ನ್ಯಾಯವಲ್ಲ. ಸರ್ಕಾರದವರು ಈ ಕಾನೂನಿನ ಸಂಬಂಧವಾಗಿ ಕೋಟ್ಯಾಂತರ ರೂಪಾಯಿಗಳನ್ನು ಪರಿಹಾರ ರೂಪದಲ್ಲಿ ಕೊಡಬೇಕಾದ ಪರಿಸ್ಥಿತಿ ಬಂದಿರುವಾಗ, ಈ ರೀತಿ ಅವರಿಂದ ಇಷ್ಟು ಸ್ವಲ್ಪ ಹಣವನ್ನು ತೆಗೆದುಕೊಂಡು ಸ್ವಾಮ್ಯವನ್ನು ಕೊಡುವುದು ಎಷ್ಟು ಮಟ್ಟಿಗೆ ನ್ಯಾಯ ಎಂಬುದನ್ನು ಯೋಚನೆ ಮಾಡಬೇಕು. ಐದಾರು ವರ್ಷದಿಂದ ಇಟ್ಟುಕೊಂಡು ಜಮೀನು ಮಾಡಿರುವವನು ಅಕ್ಕಪಕ್ಕದಲ್ಲಿರುವ ಬೆಲೆಗೆ ಆ ಜಮೀನನ್ನು ಕೊಂಡುಕೊಳ್ಳುವುದಕ್ಕೆ ಸಿದ್ಧನಾಗಿರುತ್ತಾನೆ. ಹೀಗಿರುವಾಗ ಹತ್ತು ವರ್ಷದ ಗುತ್ತಿಗೆಯಷ್ಟು ಹಣ ಕೊಟ್ಟುಬಿಟ್ಟರೆ ಜಮೀನು ಕೊಟ್ಟುಬಿಡುತ್ತೇವೆಂದರೆ ಸಂತೋಷದಿಂದ ತೆಗೆದುಕೊಳ್ಳುತ್ತಾನೆ. ಇದಕ್ಕೆ ಬದಲು ಬೆಲೆಗೆ ಕೊಟ್ಟು ಆ ಹಣವನ್ನು ಅವನು ಕೊಡುವುದಕ್ಕೆ ಹತ್ತು ವರ್ಷಗಳ ಅವಧಿ ಕೊಡಿ. ಕಂತುಗಳಲ್ಲಿ ವಸೂಲು ಮಾಡಿ ಅವನಿಂದ ತೆಗೆದುಕೊಳ್ಳುವ ಹಣವನ್ನು ಗೊತ್ತು ಮಾಡುವಾಗ ಹತ್ತು ವರ್ಷದ ಗುತ್ತಿಗೆ ತೆಗೆದುಕೊಳ್ಳದೆ ವಾಸ್ತವವಾದ ಬೆಲೆ ಏನು ಬೀಳುತ್ತದೆ ಆ ಸ್ಥಳದಲ್ಲಿ ಎಂಬುದನ್ನು ಗೊತ್ತುಮಾಡಿ. ಅಷ್ಟನ್ನು ಐದು ಅಥವಾ ಹತ್ತು ಕಂತುಗಳಲ್ಲಿ ವಸೂಲು ಮಾಡಿ ಅವನಿಗೆ ಭೂಮಿ ಕೊಡುವುದು ನ್ಯಾಯ. ಬೇಕಾದರೆ ಬಡ್ಡಿ ಕಡಿಮೆ ದರದಲ್ಲಿ ಕೊಡಲಿ, ಹೆಚ್ಚು ಕಂತುಗಳಲ್ಲಿ ಹಣವನ್ನು ಕೊಡಲಿ. ಅವನಿಗೆ ಜಮೀನಿನ ಮೇಲೆ ಹಕ್ಕನ್ನು ಕೊಡುವುದಕ್ಕಾಗಿ ದೇಶದ ಹಣವನ್ನು ಹೆಚ್ಚಾಗಿ ಖರ್ಚು ಮಾಡುವುದು ಸರಿಯಲ್ಲ. ಸರ್ಕಾರ ಖರ್ಚುಮಾಡುವ ಹಣದಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಅವನಿಂದ ತೆಗೆದುಕೊಳ್ಳಬೇಕು.

ಇನ್ನು kadim and permanent tenants: ಇವರಿಗೂ ಅನುಕೂಲ ಮಾಡಿಕೊಡುತ್ತಿದ್ದೇವೆ. ಇವರಿಗೆ ಪೂರ್ವದ ಪರಿಸ್ಥಿತಿಯಲ್ಲಿ ಇನಾಂ ಗ್ರಾಮದ ಜೀನೆಂಟುಗಳಿಗಿದ್ದ ಅಧಿಕಾರವಿತ್ತು. ಈಗ ಸರ್ಕಾರದವರು ಕೋಟ್ಯಾಂತರ ರೂಪಾಯಿ ಹಣ ಕೊಟ್ಟು ಇನಾಂ ಗ್ರಾಮಗಳನ್ನು ಕೊಂಡುಕೊಂಡು ಇವರಿಗೆ ಹೆಚ್ಚಿನ ಹಕ್ಕನ್ನು ಕೊಡುವಾಗ ಇವರೂ ಕೂಡ ಒಂದು ಗೊತ್ತಾದ ಮೊಬಲಗನ್ನು ಕೊಡಬೇಕೆಂದು ಗೊತ್ತುಮಾಡಬೇಕು. ಇವರಿಗೂ ಕೂಡ ಭೂ ಸ್ವಾಮ್ಯವನ್ನು ಕಲ್ಪಿಸಿಕೊಡುವಾಗ, ಸರ್ಕಾರದವರು ಕೊಡಬೇಕಾದ ಪರಿಹಾರದ ಹಣಕ್ಕೆ ಇವರಿಂದಲೂ ನೆರವು ದೊರೆಯುವುದು ನ್ಯಾಯ. ಇದನ್ನೂ ಸೆಲೆಕ್ಟ್ ಕಮಿಟಿಯವರು ಯೋಚನೆಮಾಡಬೇಕು.

ಇನಾಂ ಎನ್ನುವುದರಲ್ಲಿ ನಾನಾ ರೀತಿಯ ಇನಾಂ ಗ್ರಾಮಗಳು ಸೇರಿವೆ. ದೇಶದಲ್ಲಿ ಇನಾಂ ಹಕ್ಕನ್ನೇ ಸರ್ಕಾರ ತೆಗೆದುಕೊಂಡು ಬಿಡುವುದಕ್ಕೆ ಪ್ರಯತ್ನ ಮಾಡುವಾಗ ಎಲ್ಲ ವಿಧವಾದ ಇನಾಂ ಹಕ್ಕನ್ನೂ ತೆಗೆದುಕೊಳ್ಳಬೇಕು. ಇನ್ನುಮುಂದೆ ಎಲ್ಲಿಯೂ ಇನಾಂ ಹೆಸರೇ ಇರಬಾರದು. ಈ ಮಸೂದೆಯಲ್ಲಿ ಈ ರೀತಿ ವ್ಯವಸ್ಥೆ ಮಾಡಿಲ್ಲ. ಈಗ service ಇನಾಂಗಳಿವೆ, religious ಇನಾಂಗಳಿವೆ. ಇವುಗಳನ್ನೂ ಏಕೆ ಈ ಮಸೂದೆಯಲ್ಲಿ ಸೇರಿಸಲ್ಲ? ಸೆಲೆಕ್ಟ್ ಕಮಿಟಿಯವರಾದರೂ ಈ ಇನಾಂಗಳನ್ನೂ ತೆಗೆದುಕೊಳ್ಳುವಂತೆ ಸೂಚನೆ ಮಾಡಬೇಕು. ಇನಾಂದಾರರು ಸರ್ಕಾರಕ್ಕೂ ಭೂಮಿಯ ಒಡೆಯರಿಗೂ ಮಧ್ಯೆ ಒಂದು ಏಜೆನ್ಸಿ. ಹೀಗಿರುವಾಗ ಎಲ್ಲ ರೀತಿಯ ಇನಾಂಗಳನ್ನು ತೆಗೆದುಕೊಳ್ಳುವುದು ಸೂಕ್ತವೆಂದು ನನ್ನ ಸಲಹೆ. ಇದರಿಂದ ಒಂದುವೇಳೆ ದೇವಸ್ಥಾನಗಳಿಗೆ ಬರತಕ್ಕ ಉತ್ಪತ್ತಿ, ಕಡಿಮೆಯಾಗಿ ಪೂಜೆ ನಿಂತುಹೋಗುತ್ತದೆಂದರೆ, ದೇವರ ಮೇಲೆ ಜನರಿಗೇ ಅಭಿಮಾನವಿಲ್ಲದೇಯಿರುವುದಕ್ಕೆ ಸರ್ಕಾರ ಏನು ಮಾಡುವುದಕ್ಕಾಗುತ್ತದೆ? ಪಟೇಲರಿಗಿರುವ ಇನಾಂ ಜಮೀನುಗಳನ್ನು ತೆಗೆದುಕೊಂಡುಬಿಟ್ಟರೆ ಅವರಿಗೆ ಸಂಬಳ ಕೊಡಬೇಕಾಗುವುದೆಂದು ಸರ್ಕಾರಕ್ಕೆ ಹೆದರಿಕೆ ಇರಬಹುದು; ಹಾಗಾದರೆ ಒಂದುವೇಳೆ ಕೊಡೋಣ, ಇಟ್ಟಿದ್ದರೆ ಇನಾಂ ಜಮೀನನ್ನು ಪಟೇಲ ಆಫೀಸಿನ ಹೆಸರಿನಲ್ಲಿ registered occupancy ಎಂದು ಮಾಡಿದರೆ, ಎಲ್ಲಿಯವರೆಗೆ ಒಬ್ಬ ಪಟೇಲ ಕೆಲಸ ನೋಡುತ್ತಾನೋ ಅಲ್ಲಿಯವರೆಗೆ ಅವನು ಅನುಭವಿಸುತ್ತಾನೆ, ಆಮೇಲೆ ಬೇರೊಬ್ಬ ಆ ಕೆಲಸಕ್ಕೆ ಬಂದರೆ ಅವನು ಅದನ್ನು ಅನುಭವಿಸಲಿ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಗ್ರಾಮಾಧಿಕಾರಿಗಳ ಸಮ್ಮೇಳನದಲ್ಲಿ ಏನು ಅಭಿಪ್ರಾಯ ಕೊಟ್ಟಿರಿ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಸಂದರ್ಭ ಬಂದರೆ ಆಗ ಹೇಳುತ್ತೇನೆ. ನನ್ನ ಅಭಿಪ್ರಾಯವನ್ನು ಸಂದರ್ಭಾನುಸಾರ ಬದಲಾವಣೆ ಮಾಡುವುದಿಲ್ಲವೆಂದು ಮಾತ್ರ ಭರವಸೆ ಕೊಡುತ್ತೇನೆ. ಅಂತೂ ಸೆಲೆಕ್ಟ್ ಕಮಿಟಿಯವರು ಈ ಅಂಶವನ್ನು ಪರಿಶೀಲಿಸಿ ಯಾವರೀತಿ ಮಾಡಬೇಕೆಂದು ಸೂಚಿಸಲಿ,

ವ್ಯಾವಸಂಗಿಕವಾಗಿ ಇದರಿಂದ ಹೆಚ್ಚು ಬೆಳೆ ಬೆಳೆಯುವ ಯೋಜನೆಗೂ ಬಹುಮಟ್ಟಿಗೆ ಸಹಾಯವಾಗುತ್ತದೆ, ಆದಕಾರಣ Tiller of the soil should be the owner of the land ಎಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಇದಕ್ಕೆ ಒಂದು ಮಾತ್ರ ಹೇಳಬೇಕಾಗಿದೆ. ಜಮೀನುಗಳನ್ನು ಹೊಂದಿರತಕ್ಕ ಜನ ಇನಾಂದಾರರು ಮಾತ್ರವಲ್ಲ, ಬೇರೆಯವರೂ ಇದ್ದಾರೆ. ಅನೇಕರು 'ಸದ್ಯ ಯಾರಾದರೂ ನಮ್ಮ ಜಮೀನನ್ನು ಕೊಂಡುಕೊಂಡರೆ ಸಾಕು, ನಾವೂ ಬೆಂಗಳೂರು ಮೈಸೂರು ಪಟ್ಟಣಗಳಿಗೆ ಹೋಗಿ ಅಲ್ಲಿ ಸುಖವಾಗಿರೋಣ' ಎಂದಿದ್ದಾರೆ. (ನಗೆ!) ನಾನೇನೂ ತಮಾಷೆಗಾಗಿ ಈ ಮಾತನ್ನು ಹೇಳುತ್ತಿಲ್ಲ. ಇದು ವಾಸ್ತವವಾದ ಸಂಗತಿ. ಜಮೀನು ಒಂದು ಆಸ್ತಿ ಎಂಬ ಭಾವನೆಯಿರುವುದರಿಂದ ಅದರ ಮೇಲೆ ಅಭಿಮಾನ

ವಿದೆಯೇ ಹೊರತು ಅದನ್ನು ವ್ಯವಸಾಯ ಮಾಡಬೇಕೆಂಬ ಆಸೆ ಅನೇಕರಿಗಿಲ್ಲ. Tiller of the soil should be the owner of the land ಎಂಬ ತತ್ವವನ್ನು ಕೂಲಂಕಷವಾಗಿ ಯೋಚನೆ ಮಾಡಿದರೆ ಇದರಿಂದ ದೇಶಕ್ಕೆ ಅಹಿತವೇ ಹೊರತು ಹಿತವಿಲ್ಲ. ಯಾವನು ಜಮೀನನ್ನು ಉಳುವುದಿಲ್ಲವೋ ಅವನಿಗೆ ಜಮೀನಿರಬಾರದೆಂದು ಈ ತತ್ವದ ಅರ್ಥ. ಒಬ್ಬ ಮನುಷ್ಯ ಐದು, ಆರು ಅಥವ ಹೆಚ್ಚೆಂದರೆ ಏಳು ಎಕರೆ ಜಮೀನು ಉಳುವುದೇ ಹೆಚ್ಚು. ಈಗ ಸಾಮಾನ್ಯವಾಗಿ 50 ಎಕರೆಗಳ ಮೇಲೆ ಜಮೀನಿರುವವರು ನಮ್ಮ ಸಂಸ್ಥಾನದಲ್ಲಿ 16 ಸಾವಿರ ಜನರಿದ್ದಾರೆ. ಇನ್ನು ಎಂಟು ಲಕ್ಷ ಜನ ರೈತರು ಒಂದೆಕರೆಯಿಂದ 5) ಎಕರೆ ಜಮೀನಿನೊಳಗೆ ಇರುವವರು. 50 ಎಕರೆ ಮೇಲೆ ಇರುವವರು ಜಮೀನನ್ನು ಉಳುವುದಿಲ್ಲ. ಅವರು ಸಾಮಾನ್ಯವಾಗಿ absentee landlords. 50 ಎಕರೆಯೊಳಗೆ ಇರುವವರು ಲಕ್ಷಾಂತರ ರೈತರಿದ್ದಾರೆ. ಹೀಗಿರುವಾಗ ದೊಡ್ಡ ದೊಡ್ಡ ಜಮೀನ್ದಾರರಿಂದ ಜಮೀನುಗಳನ್ನು ಬಿಡಿಸಿಕೊಳ್ಳುವುದು ಸುಲಭ. ಆದರೆ ಎಂಟು ಹತ್ತು ಎಕರೆ ಇರುವವರಿಂದ ಬಿಡಿಸಿಕೊಳ್ಳಲು ಪ್ರಯತ್ನಪಟ್ಟರೆ, ಲಕ್ಷಾಂತರ ಸಣ್ಣಪುಟ್ಟ ರೈತರು ತಮ್ಮ ಜಮೀನನ್ನು ಬಿಟ್ಟುಕೊಡುವುದಕ್ಕೆ ಸಿದ್ಧರಾಗಿದ್ದಾರೆಂಬುದು ವಾದ ಗ್ರಸ್ತವಾದ ವಿಚಾರ. ಒಂದು ಮೇಳೆ ಒಬ್ಬನಿಗೆ ಐದು ಎಕರೆ ಇರುತ್ತದೆ, ಅವನಲ್ಲಿ ಹೆಚ್ಚು ಹಣವಿದ್ದರೆ ಇನ್ನೊಂದು ಐದು ಎಕರೆಯನ್ನು ಕೊಂಡುಕೊಳ್ಳುತ್ತಾನೆ, ಆ ಜಮೀನನ್ನು ಉಳಿಸುತ್ತಿರುವಾಗ ಈ ತತ್ವವನ್ನು ಅನ್ವಯಿಸಿದರೆ, ಅವನು ಕೂಲಿ ಕೊಟ್ಟು ಜಮೀನನ್ನು ಉಳಿಸಿತ್ತಿದ್ದರೆ, ಆ ಉಳುತ್ತಿರುವವರಿಗೇ ಆ ಜಮೀನು ಸೇರಿದ್ದು ಎಂದು ಹೇಳಿದರೆ ಹೇಗಿರುತ್ತದೆಂದು ನೋಡಿ. ಹೀಗೆ ವ್ಯವಸಾಯದಲ್ಲಿ ಕೂಲಿ ಮಾಡಲು ಯಾರ್ಯಾರು ಬರುತ್ತಾರೋ ಅವರಿಗೆಲ್ಲಾ ಜಮೀನನ್ನು ಹಂಚಬೇಕಾಗುತ್ತದೆ.

ತಾವು ಈಗ ಒಬ್ಬ ದೊಡ್ಡ ಜಮೀನ್ದಾರನ ಜಮೀನನ್ನು ಅಲ್ಲಿ ಕೆಲಸ ಮಾಡುವ 30–40 ಜನಗಳಿಗೆ ಒಂದೆರಡು ಎಕರೆಗಳ ಪ್ರಕಾರ ಹರಿದು ಹಂಚಿಕೊಡುವುದರಿಂದ ಈಗಿನ ಆಹಾರಾಭಾವ ಪರಿಸ್ಥಿತಿಬೇಗ ಕುದುರಿಕೊಳ್ಳುತ್ತದೆಂದು ಭಾವಿಸಿರಬಹುದು. ಆದರೆ ಹೀಗೆ ಹೇಳುವುದು ಬಹಳ ಸುಲಭ; ಆ 30–40 ಜನಗಳನ್ನು ಹಿಡಿದು ಕೆಲಸಮಾಡಿಸಬೇಕಾದರೆ ಆಗ ಕಾಣುತ್ತೆ ಕಷ್ಟ. ಅಲ್ಲದೆ ಹೀಗೆ ಹಂಚುವ ಕೆಲಸವಾದರೂ ಸಾಮಾನ್ಯವಾದದ್ದೇನು? ಆದರೆ ಹೀಗೆ ಮಾಡುವುದರಿಂದ ಆಹಾರ ಪರಿಸ್ಥಿತಿ ಉತ್ತಮಗೊಳ್ಳುತ್ತದೆಂಬುದನ್ನು ಖಂಡಿತ ಒಪ್ಪುವುದಕ್ಕಾಗುವುದಿಲ್ಲ. ಇದರಲ್ಲಿ ತಾವು ಮುಖ್ಯವಾಗಿ ಒಂದು ಅಂಶವನ್ನು ಗಮನಿಸಬೇಕಾಗಿದೆ— ಇತರ ಉದ್ಯಮಗಳು ಅಷ್ಟುಬೇಗ ಅಭಿವೃದ್ಧಿಗೆ ಬರುವುದಕ್ಕೂ ಮತ್ತು ಈ ವ್ಯವಸಾಯ ಹಾಗೆ ಅಭಿವೃದ್ಧಿಗೆ ಬಾರದಿರುವುದಕ್ಕೂ ಕಾರಣವೇನೆಂಬುದನ್ನು ಆಲೋಚಿಸಬೇಕು. ಈ ಆಹಾರ ಸಮಸ್ಯೆ ಬೇಗ ಪರಿಹಾರವಾಗಬೇಕಾಗಿದ್ದರೆ ವ್ಯವಸಾಯ ವೃತ್ತಿಯನ್ನು ದೊಡ್ಡದಾದ ಪ್ರಮಾಣದಲ್ಲಿ ಒಂದು business proposition ರೀತಿಯಲ್ಲಿ ಪ್ರಾರಂಭಿಸಿದರೆ ಸಾಧ್ಯವಾದೀತೇ ವಿನಾ ತಮ್ಮ ತಮ್ಮ ಹೊಟ್ಟೆಯಪಾಡಿಗೋಸ್ಕರವಾಗಿ ಬೆಳೆದುಕೊಳ್ಳುವಂಥ ಸಣ್ಣಪುಟ್ಟ ವ್ಯವಸಾಯಗಾರರಿಂದ ಇದನ್ನು ಕ್ರಮಪಡಿಸಬೇಕೆಂದು ಹೇಳುವುದು ಸರಿಯಲ್ಲ. ಬೇರೆ ಬೇರೆ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಲಕ್ಷಾಂತರ ಕೂಲೀ ಜನಗಳನ್ನಿಟ್ಟುಕೊಂಡು ಘಂಟೆಘಂಟೆಗೂ ಹೇಗೆ ಲಕ್ಷಾಂತರ ಗಜಗಳಗಟ್ಟಲೆ ಬಟ್ಟೆಯನ್ನು ತಯಾರಿಸಿ ದೇಶದೇಶಕ್ಕೂ ಒದಗಿಸುತ್ತಿದ್ದಾರೋ ಆ ರೀತಿಯಲ್ಲಿ ಈ ಆಹಾರದ ಬಗ್ಗೆಯೂ ದೊಡ್ಡ ದೊಡ್ಡ ಹಿಡುವಳಿ ಜಮೀನುಗಳನ್ನು ಪ್ರೋತ್ಸಾಹಿಸಿ ಹೆಚ್ಚು ವ್ಯವಸಾಯ ನಡೆಸುವಂತೆ ಮಾಡಿದರೆ ಸಾಧ್ಯವಾದೀತೇ ವಿನಾ ಇಂಥಾ ಸಣ್ಣಪುಟ್ಟ ಜಮೀನ್ದಾರರುಗಳಿಂದ ಇದು ಖಂಡಿತ ಸಾಧ್ಯವಾಗದ ಮಾತು. ಈ ಸಣ್ಣಪುಟ್ಟ ಜಮೀನ್ದಾರರುಗಳೆಲ್ಲಾ ತಮ್ಮ ಹೊಟ್ಟೆಗಾಗಿ ದುಡಿಯುತಕ್ಕವರು. ಪಾಶ್ಚಿಮಾತ್ಯ ರಾಷ್ಟ್ರಗಳವರು ಎಂದರೆ ಇಂಗ್ಲೆಂಡ್, ಅಮೇರಿಕಾ ದೇಶಗಳವರು ಈ ವ್ಯವಸಾಯವನ್ನು ಸಹ ಅಲ್ಲಿ ಇತರ ಉದ್ಯಮಗಳಂತೆ ಒಂದು business proposition ಪ್ರಕಾರ ನಡೆಸುತ್ತಿರುವುದರಿಂದಲೇ ಅವರು ಅಷ್ಟು ದ್ರವ್ಯಾರ್ಜನೆ ಮಾಡುತ್ತಿರುವುದು. ಆದರೆ ತಾವು ಆರೀತಿ ಮಾಡುವೆ ಒಬ್ಬೊಬ್ಬರಿಗೂ 3—4 ಎಕರೆಗಳಂತೆ ಹರಿದು ಹಂಚಿಕೊಟ್ಟರೆ ಈ ಆಹಾರ ಪರಿಸ್ಥಿತಿ ಸುಧಾರಿಸುತ್ತದೆಂದು ಯಾರಾದರೂ ಭಾವಿಸಿದ್ದರೆ ಅಥವ ನಂಬಿಕೊಂಡಿದ್ದರೆ ಅದು ತಪ್ಪು ಅಭಿಪ್ರಾಯ ಮತ್ತು ತಪ್ಪು ಭಾವನೆಯೆಂದು ಭಾವಿಸಬೇಕಾಗುತ್ತದೆ. ತಾವಾದರೂ ಕೂಡ ಇದನ್ನು ಸಾವಧಾನವಾಗಿ ಆಲೋಚನೆ ಮಾಡಿನೋಡಿ. ತಾವು ಇದನ್ನು ಶೀಘ್ರವಾಗಿಯೇ ಮಾಡಬೇಕೆಂದು ನಾನು ಹೇಳುವುದಿಲ್ಲ. ನಿಧಾನವಾಗಿ ಆಲೋಚನೆ ಮಾಡಿದರೆ ಈ ಅಂಶಗಳೆಲ್ಲ ತಾನಾಗಿಯೇ ತಮಗೆ ಭಾಸವಾಗುತ್ತವೆ.

ಮತ್ತೊಂದು ವಿಚಾರವೇನೆಂದರೆ —ಈ ಇನಾಂದಾರರಾದ ತಾವು ಬೇಗ ಜಮೀನುಗಳನ್ನು ತೆಗೆದುಕೊಳ್ಳುವಂತೆ ಮಾಡಬೇಕು ಇಲ್ಲವಾದರೆ ಬಹಳ ಜಮೀನು ಜಾಗ್ರತೆ ಬೇರೆಯವರ ಕಡೆಗೆ ಹೋಗಿ ಬಿಡುತ್ತವೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಆದರೆ ಆ ರೀತಿ ಬೇಗ ತೆಗೆದುಕೊಳ್ಳುವಂತೆ ಮಾಡುವುದು ಬಹಳ ಸಂತೋಷದ ವಿಚಾರವೇ ಹೌದು ಆದರೆ ಇದೇ ವಿಚಾರವಾಗಿ ಮೊನ್ನೆತಾನೆ ಯಾರೋ ಒಬ್ಬ ಸ್ನೇಹಿತರು ಮಾತನಾಡುತ್ತಿದ್ದರು. ಏನೆಂದರೆ—"ಬಹಳ ಒಳ್ಳೆ ಕೆಲಸ ಮಾಡಿದರು, ತರತೆಗೊಳಿದುಕೊಂಡು ಬಿಟ್ಟೆಸ್ಟಾಯಿ ಎಲ್ಲೋ ಕೇವಲ 1¾ ಎಕರೆ ಮಾತ್ರ ಇನ್ನೂ ಉಳಿದುಕೊಂಡಿತ್ತು. ಅದನ್ನೂ ಈ ದಿವಸ ಕೊಟ್ಟು ತರತೆಗೊಳಿದುಕೊಂಡು ಬಿಟ್ಟೆಸ್ಟಾಯಿ" ಎಂದು. ಇದರಿಂದ ಏನು ಅರ್ಥವಾಗುತ್ತದೆಯೆಂದರೆ ಜನರಿಗೆ ಈಗ ಎಲ್ಲೆಲ್ಲಿಯೂ ಜಮೀನುಗಳ ಮೇಲಿನ ವ್ಯಾಮೋಹ ಕಮ್ಮಿಯಾಗುತ್ತಿದೆ ಎಂಬುದು ಗೊತ್ತಾಗುತ್ತದೆ ಆದರೆ ನಾನು ಈ ಸಂಬಂಧವಾಗಿ ಈಗಲಾದರೂ ಹೇಳುವುದಿಷ್ಟೆ: ನೀವು ಈ ರೀತಿಯ ಶಾಸ್ತ್ರೀಯ ಕಾನೂನು ಮಾಡುವಾಗ, ಈ ಭೂಸ್ವಾಮ್ಯತ್ವದ ವಿಚಾರದಲ್ಲಿ ನೀವು ಮುಂದಕ್ಕೆ ಒಂದೊಂದು ಹೆಜ್ಜೆಯನ್ನಿಡಬೇಕಾಗಿದ್ದರೂ ಬಿಡಿಸಿ, ಬಿಡಿಸಿ, ಬಿಚ್ಚಿನೋಡಿ ಮುಂದುವರಿಯಬೇಕೇ ವಿನಾಯಿ ಥಟ್ಟನೆ "ಉತ್ತುವನಿಗೆ ಭೂಮಿ, ಕಟ್ಟಿದವನಿಗೆ ಫುನೆ" ಎಂಬ ಸ್ಲೋಗನ್ ಪ್ರಕಾರ ಮುಂದುವರಿದರೆ, ಮೋಟಾರು ನಡೆಸತಕ್ಕವನೇ ಮೋಟಾರಿನ ಮಾಲೀಕನೆಂದೂ, ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕವರೆಲ್ಲಾ ತಾವೇ ಕಾರ್ಖಾನೆಯ ಮಾಲೀಕರು ಎಂದು ಹೇಳುವಾಗ ತಮ್ಮ ಈ ತತ್ವ ಎಲ್ಲ, ಯಾವ ನುಟ್ಟದಲ್ಲಿ ನಿಲ್ಲುತ್ತದೆ! ಇದನ್ನೂ ಆಲೋಚನೆ ಮಾಡಿನೋಡಿ. ಆದರೆ ಕೆಲವು ಮಾನ್ಯ ಸದಸ್ಯರುಗಳ ಮನಸ್ಸಿನಲ್ಲಿ ಬಹುಶಃ ರಷ್ಯಾದೇಶದಲ್ಲಿ ಈ ರೀತಿ ಆಚರಣೆ ಬಹಳ ಚೆನ್ನಾಗಿ ನಡೆಯುತ್ತಿದೆಯೆಂಬ ಭಾವನೆ ಅವರ ಮನಸ್ಸಿನಲ್ಲಿ ಬೇರೂರಿರುವಂತೆ ಕಾಣುತ್ತಿದೆ. ಆದರೆ ಅದೇ ರಷ್ಯಾದೇಶದಲ್ಲಿ ಇಂದು ಸ್ಥಿತಿಗತಿಗಳು ಏನಾಗಿವೆ.

(ಶ್ರೀ ಎಚ್. ಎಂ. ಚೆನ್ನಬಸಪ್ಪನವರು).

ಯೆಂಬುದನ್ನು ಅವರಿಂದ ಕೇಳುವುದಕ್ಕೆ ಬದಲಾಗಿ ತಾವೇ ಅಲ್ಲಿಗೆ ಹೋಗಿ ಖುದ್ದಾಗಿ ಪರಾಂಬರಿಸಿಕೊಂಡು ಬಂದರೆ ಆಗ ಗೊತ್ತಾಗುತ್ತದೆ. ಅಲ್ಲಿಗೆ ಹೋಗಿ ನೋಡಿದರೆ ಆ ರಷ್ಯಾದೇಶದಲ್ಲಿರುವ ಸರ್ವ ಸ್ವಾಮ್ಯತ್ವದ ಪುನರ್ ಗಣಪ್ಪು ಬಂಡವಾಟಕ್ಕೆ ಬಂದು ಎಷ್ಟೆಷ್ಟು ರೀತಿಯಲ್ಲಿ ಕಷ್ಟನಷ್ಟಗಳಿಗುತ್ತಿವೆಯೆಂಬುದು ತೋರಿಬರುತ್ತದೆ. ಹೀಗೆ ರಷ್ಯಾದೇಶದಲ್ಲಿ ಒಂದು ಕ್ರಾಂತಿಕಾರಕ ಬದಲಾವಣೆಯನ್ನು ತಂದಮೇಲೆ ಅಲ್ಲಿನ ಭೂಸ್ವಾಮ್ಯತ್ವವೆಲ್ಲಾ ಒಂದೇ ಕಡೆ ಕೇಂದ್ರೀಕೃತವಾದನಂತರ ಜನಗಳ್ಯಾರೂ ಸರಿಯಾಗಿ ಉದ್ಯಮಗಳನ್ನೇ ಮಾಡದೆ ವಿಪರೀತ ಕಷ್ಟನಷ್ಟಗಳುಂಟಾಗಿ ಅಲ್ಲಿನ ಉತ್ಪನ್ನವೇ ಕಮ್ಮಿಯಾಗಿ ಹೋಗಿದೆ. ಇಲ್ಲಿಯಾದರೋ ನಾವು ಈಗ ಅದೇ ರೀತಿ ಹಿಂದಿನಿಂದಲೂ ಇದ್ದಂಥ ರೈತವಾರಿ ಪದ್ಧತಿಯನ್ನು ತಪ್ಪಿಸುವ ಅಥವಾ ಅದಕ್ಕೆ ಅಡಚಣೆಯುನ್ನುಂಟು ಮಾಡಲು ಪ್ರಯತ್ನಿಸುವ ಮಾಗ ಕೊಡಿದ್ದೀರೆಂದು ನಾನು ತಮಗೆ ಒತ್ತಿ ಹೇಳಬೇಕಾಗಿದೆ.

Sri S. RANGA RAO.—Question!

The Hon'ble Sri H. C. DASAPPA.—Neither of you has seen Russia?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅದು ಹೇಗೆಂಬುದನ್ನು ನಾನು ತಮಗೆ ತೋರಿಸಿಕೊಡುತ್ತೇನೆ. ತಾವು ಈಗ ಜಮೀನು ಸಂಬಂಧವಾಗಿ ಕ್ರಾಂತಿಕಾರಕ ಬದಲಾವಣೆಯನ್ನು ಮಾಡಿ, ಈ ಬಗೆ ತಾವು ಒಂದು ಸುಧಾರಿತ ರೀತಿಯಲ್ಲಿ ಹೋಗದೆ ಕ್ರಾಂತಿಕಾರಕ ಬದಲಾವಣೆಯಿಂದ ಕ್ರಾಂತಿ ಏಳುತ್ತದೆಯೇ ವಿನಾ ಇವರಿಂದ ಒಂದು ಸುಧಾರಣೆಯಾದಂತೆ ಆಗುವುದಿಲ್ಲವೆಂಬುದನ್ನು ನಾನು ಪುನಃ ತಮ್ಮಲ್ಲಿ ಒತ್ತಿ ಒತ್ತಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ನಾನು ಹೀಗೆ ಬರೆದ ಪಾತ್ರಕ್ಕೇ ಈ ಜೋಡಿ, ಜಹಗೀರುಗಳನ್ನು ತೆಗೆದುಕೊಳ್ಳಲೇ ಬಾರದೆಂಬುದು ನನ್ನ ಅಭಿಪ್ರಾಯವಲ್ಲವೆಂಬುದು ತಮಗೇ ಗೊತ್ತಿದೆ. ನಾನೇನು ದೊಡ್ಡ ಜಮೀನ್ದಾರನಲ್ಲ. ಅದಕ್ಕಾಗಿ ನಾನು ಇಷ್ಟೆಲ್ಲವನ್ನೂ ವಾದಮಾಡುತ್ತಿಲ್ಲ. ಅಗತ್ಯವಾಗಿ, ಜನರೆಲ್ಲರೂ ದೇಶದ ಹಿತದೃಷ್ಟಿ ನೋಡಿ, ಅದಕ್ಕನುಗುಣವಾದ ರೀತಿಯಲ್ಲಿ ನಡೆದುಕೊಂಡರೆ ನನ್ನ ಅಭ್ಯಂತರವೇನೂ ಇಲ್ಲ. ತಾವಾದರೂ ಜಮೀನುಗಳನ್ನು ಹುಗಸಾಟಿ ತೆಗೆದುಕೊಳ್ಳುತ್ತೀರೇನು? ಹಾಗೆ ಹುಗಸಾಟಿ ತೆಗೆದುಕೊಳ್ಳಲು ಪರಿಹಾರ ದ್ರವ್ಯವನ್ನು ಕೊಟ್ಟೇ ತಾವಾದರೂ ತೆಗೆದುಕೊಳ್ಳುತ್ತೀರಿ. ಆದರೆ ದೇಶದ ಹಿತದೃಷ್ಟಿಯಿಂದ ಮಾಡತಕ್ಕ ಕೆಲಸಕ್ಕೆ ನಾನು ಯಾವಾಗಲ್ಲೂ ಮುಂದೆ ಬರತಕ್ಕವನಾಗಿದ್ದೇನೆ. ಆದರೆ ಇಡೀ ಭೂಮಿ, ಫಾಯು, ನೀರು, ಅಪ್ಪು, ತೇಜಸ್ಸು, ಹೀಗೆ ಪರಮಾತ್ಮನು ಏನೇನು ಅನುಕೂಲಗಳನ್ನು, ಅಸ್ತಿ ಪಾಸ್ತಿಗಳನ್ನು ಕೊಟ್ಟಿದ್ದಾನೋ ಅವುಗಳೆಲ್ಲವನ್ನೂ, ಯಾರು ಯಾವುದಕ್ಕೆ ಅರ್ಹರಿದ್ದೆಯೋ ಅದೆಲ್ಲವನ್ನೂ ಅಂದರೆ ತಮ್ಮ ಸರ್ವಸ್ವವನ್ನೂ, ದೇಶದ ಹಿತದೃಷ್ಟಿಗಾಗಿ ಕೊಡಲು ಮುಂದೆ ಬರುಕ್ಕವರಾಗಿದ್ದರೆ ಅದೇ ರೀತಿ ಈ ಜಮೀನ್ದಾರರೂ ಕೂಡ ತಮ್ಮ ಸರ್ವಭೂಮಿಯನ್ನೂ ದೇಶದ ಹಿತಕ್ಕಾಗಿ ಏಕೆ ಬಿಟ್ಟುಕೊಡಬಾರದು? ಹಿಗೆ ಯಾರಾದರೂ ಮುಂದೆ ಬಂದು ದೃಷ್ಟಿತೋರಿಸಿದರೆ, ಅದೇ ರೀತಿ ದೇಶದ ಹಿತದೃಷ್ಟಿಯಿಂದ ನಾನೂ ಸಹ ನನ್ನ ಸರ್ವಸ್ವವನ್ನೂ ತ್ಯಾಗಮಾಡಲು ನಾನು ಸದಾ ಸಿದ್ಧನಾಗಿರುತ್ತೇನೆಂಬ ಅಂಶವನ್ನು ನಾನು ನನ್ನ ಮಾನ್ಯ ಸ್ನೇಹಿತರಿಗೆ ತಿಳಿಸಬೇಕಾಗಿದೆ. ಒಟ್ಟಿನಲ್ಲಿ ನಾನು ಹೇಳುವುದು ಈ ಮಸೂದೆಯು ಈಗ ಸೆಲೆಕ್ಟ್ ಸಮಿತಿಯವರ ಮುಂದೆ ಹೋಗತಕ್ಕದ್ದಾಗಿದೆ. ಅವರು ಸಾವಕಾಶವಾಗಿ ಈ ಎಲ್ಲಾ ಅಂಶಗಳನ್ನೂ ತಮ್ಮ ಗಮನದಲ್ಲಿಟ್ಟುಕೊಂಡು, ಏನೇನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೋ ಮತ್ತು ಏನೇನು ಸೂಕ್ತ ಬದಲಾವಣೆಗಳನ್ನು ಮಾಡಬೇಕೋ ಅವುಗಳೆಲ್ಲವನ್ನೂ ಮಾಡಿ, ಕ್ರಾಂತಿಕಾರಕ ಬದಲಾವಣೆಗೆ ಬದಲಾಗಿ ಸುಧಾರಿತ ರೀತಿಗೆ ಅನುಗುಣವಾಗುವಂತೆ ಸೂಕ್ತ ಬದಲಾವಣೆಗಳನ್ನು ಮಾಡಬೇಕೆಂದು ಸೂಚಿಸಿ ನಾನು ಈ ತಿದ್ದುಪಡಿ ಸೂಚನೆಗೆ ನನ್ನ ಬೆಂಬಲವನ್ನು ಕೊಡುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ದೇಶದ ಸಂಪತ್ತು ಒಬ್ಬಿಬ್ಬರ ಕೈಯಲ್ಲಿ ಸೇರಿರಬಾರದೆಂಬ ಭಾವನೆ ಬಲವಾಗಿ ಬೆಳೆಯುತ್ತಾ ಇದೆ. ದೇಶದ ಇತರ ವರ್ಗಗಳ ಜನರಲ್ಲಿ ಅವರವರ ಹಕ್ಕುಬಾಧ್ಯತೆಗಳ ವಿಚಾರದಲ್ಲಿ ಜಾಗೃತಿ ಉಂಟಾಗಿರುವಂತೆ ರೈತರಲ್ಲೂ ಸ್ವಾಭಾವಿಕವಾಗಿ ಜಾಗೃತಿ ಉಂಟಾಗಿದೆ.

ರೈತನ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ವ್ಯವಸಾಯದ ಅಭಿವೃದ್ಧಿಯನ್ನು ಗಮನಿಸಿ ಸರ್ಕಾರದವರು ಭೂಸುಧಾರಣಾ ಸಮಿತಿಯನ್ನು ನೇಮಕ ಮಾಡಿದರು. ಆ ಸಮಿತಿಯವರು ಬಹಳ ಕಷ್ಟಪಟ್ಟು ಉಪಯುಕ್ತವಾದ ಸಲಹೆಗಳನ್ನೊಳಗೊಂಡ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಎಲ್ಲಾ ವಿಧವಾದ ಇನಾಂತಿಗಳನ್ನೂ ಕೂಡ ರದ್ದುಮಾಡಬೇಕೆಂಬ ಸಲಹೆ ಮಾಡಿದ್ದಾರೆ ಈಗಿರುವಂತೆ ಇನಾಂ ಗ್ರಾಮವೆಂದರೆ ಯಾವುದು ಎಂಬುದನ್ನು ಎರಡನೆಯ ಸೆಕ್ಷನ್ (1)ನೆಯ ಕ್ಲಾಜಿನಲ್ಲಿ ಈ ರೀತಿಯಾಗಿ ಹೇಳಿದ್ದಾರೆ:—"Inam Village means an alienated village whether Sarvamanya, Jodi or Khayamgutta;" ಆ ಮೇಲೆ ಮೈನರ್ ಇನಾಂ ಕೂಡ ವಿವರಿಸಿದ್ದಾರೆ. ಅದು (11)ನೆಯ ಕ್ಲಾಜಿನಲ್ಲಿ ಈರೀತಿ ಹೇಳಿದೆ :—"minor inam means an alienated holding other than an inam village, situated in an inam village." ಆದ್ದರಿಂದ ಏನು ವ್ಯಕ್ತವಾಗುತ್ತದೆಂದರೆ ಈ ಮಸೂದೆಯು ಇನಾಂ ಗ್ರಾಮಗಳಲ್ಲರುವ ಧಾರ್ಮಿಕ ಸಂಸ್ಥೆಗೆ ಸೇರಿದ ಜಮೀನುಗಳಿಗೆ ಅನ್ಯಾಯ ಸುವುದಿಲ್ಲ ಎಂಬುದು. ನನ್ನ ಮಿತ್ರರು ಅನೇಕರು ಈಗ ತಾನೆ ಹೇಳಿದಹಾಗೆ ಇನಾಂ ಗ್ರಾಮಗಳೇ ಅಲ್ಲದೆ ಮಠ, ದೇವಸ್ಥಾನ ಮುಂತಾದ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಜಮೀನುಗಳು ಸಂಸ್ಥಾನದಲ್ಲಿ ಹೇರಳವಾಗಿವೆ. ಅದರಲ್ಲೂ ಮಲೆನಾಡಿನ ಕೆಲವು ತಾಲ್ಲೂಕುಗಳಲ್ಲಿ ಕಾಲು ಭಾಗದಷ್ಟು ಜಮೀನುಗಳು ಮಠ ಮತ್ತು ದೇವಸ್ಥಾನಗಳಿಗೆ ಸೇರಿವೆ. ಅವುಗಳನ್ನು ಸಾಗು ಮಾಡುವ ರೈತರ ಸ್ಥಿತಿ ಇನಾಂ ಗ್ರಾಮಗಳ ರೈತರ ಸ್ಥಿತಿಗಿಂತ ಬಹಳ ಶೋಚನೀಯವಾಗಿದೆ. ಅನೇಕ ಸಂದರ್ಭಗಳಲ್ಲಿ ಈ ಧಾರ್ಮಿಕ ಸಂಸ್ಥೆಗಳಿಗೆ ಸೇರಿರುವ ಜಮೀನುಗಳನ್ನು ಮುಜರಾಯಿ ಇಲಾಖೆಯವರು 5 ಅಥವಾ 10 ವರ್ಷಗಳಿಗೊಂದುಸಲ ಹರಾಜು ಮಾಡುತ್ತಾರೆ. ಅದರ ಪರಿಣಾಮವಾಗಿ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಜಮೀನು ಈ ದಿವಸ ಬಹಳ ಕನಿಷ್ಟ ದರ್ಜೆಗೆ ಬರಿದಿದೆ. ಅದರಲ್ಲೂ ಬಾಗಾಯತು ಜಮೀನೂ ಸಹ ಬಹಳ ಕಟ್ಟಿದೆ. ಏಕೆಂದರೆ ಹರಾಜಿನಲ್ಲಿ ಪಡೆದ ಜಮೀನು ಗೇಣಿದಾರರಿಗೆ ಶಾಶ್ವತವಲ್ಲ, ಆದ್ದರಿಂದ ಜಮೀನಿನಲ್ಲಿ ಬೆಳೆದ ಫಸಲನ್ನು ತೆಗೆದುಕೊಳ್ಳುವುದರಲ್ಲಿ ಆತನಿಗೆ ಆಸಕ್ತಿ ಇದೆಯೇ ಹೊರತು ಜಮೀನು ಅಭಿವೃದ್ಧಿಯ ವಿಚಾರದಲ್ಲಿ ಆಸಕ್ತಿಯಿಲ್ಲ. ಹೀಗಾಗಿ ಆ ಜಮೀನ

ನನ್ನು ಅಭಿವೃದ್ಧಿಪಡಿಸುವುದಕ್ಕೆ ಅವರಿಗೆ ಏನೂ ಆಸಕ್ತಿ ಯಿರುವುದಿಲ್ಲ. ಇದರಿಂದ ಮಲೆನಾಡು ಪ್ರಾಂತಗಳಲ್ಲಿ ಮಠ ಮತ್ತು ದೇವಸ್ಥಾನಗಳಿಗೆ ಸೇರಿದ ಜಮೀನುಗಳು ಬಹಳ ಅಧೋಗತಿಗೆ ಇಳಿದಿವೆ. ಈ ದೃಷ್ಟಿಯಿಂದಲೂ ಮತ್ತು ಇಂಥ ಇನಾಂ ಜಮೀನುಗಳನ್ನು ಸಾಗು ಮಾಡುವ ರೈತರ ಹಿತದೃಷ್ಟಿಯಿಂದಲೂ ಇಂಥ ಇನಾಂತಿ ಗಳನ್ನು ಕೂಡ ರದ್ದುಪಡಿಸುವುದು ಅತ್ಯಾವಶ್ಯಕ ಎಂದು ಒತ್ತಿಹೇಳುತ್ತೇನೆ. ಅದೂ ಅಲ್ಲದೆ ಆ ಧಾರ್ಮಿಕ ಸಂಸ್ಥೆಗಳಿಗೆ ಹಿಂದೆ ಇನಾಂ ಕೊಟ್ಟಾಗ ಯಾವ ಉದ್ದೇ ಶವಿತ್ತೋ, ಯಾವ ಕಾರಣ ಇತ್ತೋ ಆ ಉದ್ದೇಶ ಅಥವಾ ಕಾರಣ ಈಗಿಲ್ಲ. ಇನ್ನೂ ಹೇಳುವುದಾದರೆ ಆ ಉದ್ದೇಶ ಎಲ್ಲೂ ಸಫಲವಾಗುತ್ತಿಲ್ಲ. ಆದ್ದರಿಂದ ಧಾರ್ಮಿಕ ಸಂಸ್ಥೆಗಳಿಗೆ ಜಮೀನುಗಳನ್ನು ಕೊಟ್ಟಿರು ವುದು ಸಾರ್ಥಕವಾಗುತ್ತಿಲ್ಲ. ಇನಾಂ ಗ್ರಾಮಗಳಲ್ಲಿ ರುವ ಜಮೀನುಗಳ ಪೈಕಿ ಕೆಲವುಭಾಗ ಜಮೀನನ್ನು ತಾವೇ ಸಾಗು ಮಾಡಬೇಕೆಂದು ಕೇಳಿದರೆ ಇನಾಂದಾರ ರಿಗೆ ಕೊಡಬೇಕು ಎಂದು ಶ್ರೀ ಚೆನ್ನಬಸಪ್ಪನವರು ಹೇಳಿದರು. ಅದನ್ನು ಒಪ್ಪುತ್ತೇನೆ. ಅವರು ಸ್ವಂತ ಸಾಗು ಮಾಡುವುದಾದರೆ ಕೆಲವುಭಾಗ ಜಮೀನನ್ನು ಅವರಿಗೆ ಕೊಡಬಹುದು, ಭೂಸ್ವಾಮ್ಯದ ವಿಚಾರ ಮತ್ತು ಇತರ ಅನೇಕ ಸಮಸ್ಯೆಗಳ ವಿಚಾರ ಕುರಿತು ಅವರು ಭಾಷಣ ಮಾಡಿದ್ದಾರೆ. ನಾನು ಅವುಗಳ ಗೊಡವಿಗೆ ಹೋಗುವುದಿಲ್ಲ. ಇನಾಂ ರದ್ದುಪಡಿಸಿದ ಮಾತ್ರದಿಂದಲೇ ಅನುಕೂಲ ಸ್ಥಿತಿ ಬರುವುದಿಲ್ಲ. ಒಂದು ವಿಚಾರವನ್ನು ಗಮನಿಸಬೇಕು. ಇದುವರೆಗೆ ಇನಾಂ ಜಮೀನು ಸಾಗುಮಾಡುವ ರೈತರು ಆ ಜಮೀನಿನಲ್ಲಿ ಯಾವ ಹಕ್ಕುಬಾಧ್ಯತೆಯನ್ನೂ ಹೊಂದಿಲ್ಲದಿರುವುದರಿಂದ ಒಂದು ರೂಪವಾಗಿ ಕೆಲವರು ಸೋಮಾರಿಯಾಗಿರ ಬಹುದು. ಅದರಿಂದ ಅಲ್ಲಲ್ಲಿ ಜಮೀನು ಪಾಳು ಬಿಟ್ಟಿರ ಬಹುದು. ಹಾಗೆಂದಮಾತ್ರಕ್ಕೆ ನಮ್ಮ ಮಿತ್ರರಾದ ಶ್ರೀ ಶ್ಯಾಮಣ್ಣಗೌಡರು ಹೇಳಿದಹಾಗೆ ರೈತರೆಲ್ಲರೂ ಸೋಮಾರಿಗಳೆಂದು ಹೇಳುವುದಕ್ಕಾಗುವುದಿಲ್ಲ. ಪಟ್ಟ ಣಿಗರಲ್ಲೂ ಸೋಮಾರಿಗಳಿದ್ದಾರೆ. ಪಟ್ಟಣದಲ್ಲೇ ಸೋಮಾರಿಗಳು ಜಾಸ್ತಿ. ಈ ಮನೂದೆಯ ಮೂಲಕ ಇನಾಂಗಳನ್ನು ರದ್ದುಪಡಿಸುವುದರಿಂದ ದೇಶದ ಸ್ಥಿತಿ ಉತ್ತಮವಾಗಬಹುದೆಂಬ ಆಶೆಯಿದೆ. ಏಕೆಂದರೆ, ಆ ಜಮೀನನ್ನು ಸಾಗುಮಾಡುವ ರೈತರಿಗೆ ಒಂದು ಶಾಸನ ಬದ್ಧ ಹಕ್ಕು ಲಭಿಸುತ್ತದೆ. ಇನ್ನು ಹೆಚ್ಚು ವಿವರ ಹೇಳದೆ ಸರ್ಕಾರದಲ್ಲಿ ಅಥವಾ ಸಲೆಕ್ಟ್ ಸಮಿತಿಯ ಸದಸ್ಯರಲ್ಲಿ ಮನವಿ ಮಾಡುವುದು ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಇನಾಂ ಕೂಡ ರದ್ದುಪಡಿಸುವ ವರದಿ ತಯಾರುಮಾಡಿ ಎಂದು. ಧಾರ್ಮಿಕ ವಿಚಾರಗಳಲ್ಲಿ ಪ್ರವೇಶಿಸಿ ಮಠ ಅಥವ ದೇವಸ್ಥಾನಗಳ ಹಕ್ಕುಬಾಧ್ಯತೆಗಳಿಗೆ ಧಕ್ಕೆ ತರಬೇಕೆಂಬ ಒಂದು ಉದ್ದೇಶದಿಂದ ನಾನು ಹೇಳುತ್ತಿಲ್ಲ. ಒಂದುವೇಳೆ ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಜಮೀನನ್ನು ಸರ್ಕಾರಕ್ಕೆ ಕೊಟ್ಟರೆ ಸಾಮಾನ್ಯವಾಗಿ ಇನಾಂದಾರರಿಗೆ ಕೊಡುವುದಕ್ಕಿಂತ ಹೆಚ್ಚಿನ ಪರಿಹಾರವನ್ನು ಕೊಡುವುದರಲ್ಲಿ ಅಭ್ಯಂತರ ವಿಲ್ಲ. ಆದರೆ ಒಂದಂಶವನ್ನು ಸ್ಪಷ್ಟವಾಗಿ ಹೇಳಬೇಕು. ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಜಮೀನನ್ನು ಕೂಡ ಸರ್ಕಾರದವರು ವಶಪಡಿಸಿಕೊಂಡು ಸಾಗು ಮಾಡುವ ರೈತರಿಗೆ ಕೊಡುವುದು ಅವಶ್ಯಕ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Janab SYED ABDUR RAHMAN (Chickmagalur *cum* Shimoga–Muslim).– Sir, this measure is undoubtedly a very welcome measure, a most memorable piece of legislation in the annals of Mysore. I am glad that it has fallen to the lot of the Hon'ble Revenue Minister to bring this happy piece of legislation before this House. Sir, I am reminded of a resolution that was moved by the late Hon'ble Sri D. S. Mallappa about 2 or 2½ years ago in the Legislative Council. When he sponsored this resolution, I was sitting next to him. Immediately after he spoke on the resolution I supported it. Since then much water has flown under the bridge. There is absolutely no doubt that this legislation is due to the urge of the modern age. The urge is there because of the fact that it is the tiller of the soil who should really succeed to the inam and not the landlord. The days of landlordism have given place to the days of tiller of the soil. He must certainly be the owner of the soil. Although such an idea has been in existence even from the medieval times, the times were not so encouraging as to bring forward such a piece of legislation as this. Even before the advent of freedom there was some move in this direction. In fact resolutions in regard to the abolition of Zamindari system were being moved a little after the advent of the Indian freedom. But in this country there has been a section of the people who have always advocated the abolition of Zamindari, system because that system is not in the interests of the tillers of the soil. We all know that the French Revolution was as a result of the revolution of the lower class of the population. There could not be close relationship between capitalism and labour, the high class people and the lower class people. I know, Sir, that this piece of legislation would be supported readily by this Hon'ble House since the one object of this legislation is to do away with one evil that has been in existence for many years. While doing so I agree that the Hon'ble Minister has in view only such of the inams and such of the Jagirs which are owned by private individuals as well as such of the Jagirs which are collectively owned. I do not know

(JANAB SYED ABDUR RAHMAN)

how far it would affect the religious endowments. An expression was given to this feeling by Sri B. M. Shamanna Gowda that such religious endowments should be made an exception. There are religious endowments which require special treatment. But as my Hon'ble friend Sri Channabasappa pointed out, no such distinction need be drawn. It must be a measure affecting wholesale all inams and jahagirs. The Government of India have taken a strong attitude regarding this. In the Bombay Presidency and in the United Provinces, this has been done very strongly and successfully. All the Zamindars and Nawabs have been given compensation and asked to part with their jahagirs and inams. It is now the turn of Mysore State where such legislation should come into being and effective steps have got to be taken in this direction. I have no doubt that this measure will be welcomed by this people as a whole.

This Bill is being referred to a Select Committee and I do not know whether there is any direction that the report should be presented to the House before the close of the session. That should not be. They will have to take their own time. I have made a suggestion in this connection that the name of Janab Mohamed Hanief should also be included in the Select Committee so that he can also offer his views. We shall be discussing this Bill once again when we can go through the whole of it thoroughly. With these few remarks I support this Bill.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಜೋಡಿ, ಇನಾಂ, ಜಹಗೀರಿಗಳನ್ನು ತೆಗೆದುಬಿಡುವ ಉದ್ದೇಶದಿಂದ ಮಾನ್ಯ ಸಚಿವರು ತಂದಿರತಕ್ಕಂಥ ಈ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನನಗೆ ಏನು ಅನ್ನಿಸುತ್ತದೆ ಎಂದರೆ, ನೂರಾರು ವರ್ಷಗಳಿಂದ ಏನೋ ಒಂದು ಶಿಕಾರಿ ಈ ಇನಾಂ ಗ್ರಾಮಗಳ ಇನಾಂದಾರರಿಗೂ ಮತ್ತು ಅಲ್ಲಿರತಕ್ಕ ರೈತರಿಗೂ ಇತ್ತು. ಅದು ಇವತ್ತು ಪರಿಹಾರವಾಗಿ ಅಲ್ಲಿಂದ ಶುಕ್ರ ಮಹರ್ದೆಶೆ ಆರಂಭವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ ಆಗ ಇನಾಂ ಗ್ರಾಮಗಳನ್ನು ಮತ್ತು ಜಹಗೀರಿಗಳನ್ನು ಏಕೆ ಕೊಟ್ಟರು ಎಂಬುದನ್ನು ನಾವು ಇವತ್ತು ಪರಿಶೀಲನೆ ಮಾಡಬೇಕಾದ್ದಿಲ್ಲ. ಆ ಕಾಲದಲ್ಲಿ ಕೊಡಬೇಕಾದ ಸಂದರ್ಭ ಇತ್ತು. ಕೊಟ್ಟರು. ಶ್ರೀ ಕಡಿದಾಳ್ ಮಂಜಪ್ಪನವರು ಆಗಲೇ ಹೇಳಿದಹಾಗೆ ಇವತ್ತಿನದಿನ ಅದು ಒಂದು ವಿಧದಲ್ಲಿ ಅನಾವಶ್ಯಕವೆಂದು ಕಂಡು ಬಂದಿದೆ. ಒಂದು ವಿಚಾರ ಹೇಳುತ್ತೇನೆ, ಇವತ್ತು ಯಳಂದೂರು ಜಹಗೀರು ಕಾನೂನು ಪ್ರಕಾರ ಹೊರಟುಹೋಗಬೇಕು ಎಂದು ಹೇಳುವ ಕಾಲದಲ್ಲಿ ಒಂದು ಅಂಶವನ್ನು ನೆನಸಿಕೊಳ್ಳಬೇಕು. ಆ ಜಹಗೀರಿಯನ್ನು ಕೊಡುವಾಗ ದಿವಂಗತರಾದ ಪೂರ್ಣಯ್ಯನವರು ನಮ್ಮ ದೇಶಕ್ಕೆ ಮಾಡಿದ ಉಪಕಾರಕ್ಕಾಗಿ ಕೊಟ್ಟರು. ಅವರು ಮಾಡಿದ ಉಪಕಾರವನ್ನು ಎಂದಿಗೂ ಸ್ಮರಿಸದೇ ಇರುವುದಕ್ಕಾಗುವುದಿಲ್ಲ. ಇದುವರೆಗೂ ಅವರ ಸಂತತಿಯವರು ಅನುಭವಿಸಿದರು. ಇವತ್ತು ಹೊರಟು ಹೋಗುವ ಕಾಲ ಬಂದಿದೆ. ಇಂಥಾ ಕಾಲದಲ್ಲಿ ಇನಾಂದಾರರುಗಳಾಗಲೀ ಅಥವಾ ಅಲ್ಲಿರತಕ್ಕ ರೈತರುಗಳಾಗಲೀ ಯಾರೂ ವ್ಯಸನ ಪಡಬೇಕಾಗಿಲ್ಲ. ಶ್ರೀ ಹುಚ್ಚೇಗೌಡರು ಜಹಗೀರಿ ಗ್ರಾಮಗಳಲ್ಲಿ ಎಷ್ಟು ತೊಂದರೆಗಳಿವೆ ಎಂಬುದನ್ನು ಹೇಳಿದ್ದಾರೆ. ಈಗಲೂ ಕೂಡ ಇದೆ. ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಅಲ್ಲಿ ಒಂದು ಸ್ಕೂಲು ಇಲ್ಲ. ಒಂದು ಸೇತುವೆ ಬಿದ್ದು ಹೋದರೆ ಅಥವಾ ರಸ್ತೆ ಕೆಟ್ಟು ಹೋದರೆ..... .....

Sri M. N. JOIS (Mysore District.—General).—On a point of information, Sir. Is Yelandur a jahagir or an inam?

ಶ್ರೀ ಎಸ್. ರಂಗರಾಮಯ್ಯನವರು.—It is a jahagir. ಅವುಗಳನ್ನು ನಿರಪಡಿಸುವುದಕ್ಕೆ ಆಗದೆ ಬಹಳ ಕಷ್ಟವಾಗಿದೆ. ಅಥವಾ ಅದೂ ಅಲ್ಲದೆ ಹೆಚ್ಚು ಆದಾಯ ಬೆಳೆ ಬೆಳೆಯುವ ಯೋಜನೆಯ ಸಂಬಂಧವಾಗಿ ತಕಾವಿ ಸಾಲಗಳನ್ನು ಕೊಡುವಾಗಲೂ ಮತ್ತು ಬಾವಿಗಳಿಗೆ ಸಬ್‌ಸಿಡಿ ಕೊಡುವ ಕಾಲದಲ್ಲಿ ಸಬ್‌ಸಿಡಿ ಕೊಡುವಾಗಲೂ ಬಹಳ ಕಷ್ಟವಾಗಿ ಇದುವರೆಗೂ ಕೊಡದೆ ಈಚೀಚೆಗೆ ರೂಲ್ಸಿನ್ನು ಸ್ವಲ್ಪ ನಡಿಲವಾಡಿಕೊಟ್ಟಿದ್ದಾರೆ ಏಕೆಂದರೆ, ಜಮೀನ್ದಾರುಗಳು ಇನಾಂದಾರರುಗಳಿಗೆ ಸೇರಿದ್ದು ಫಸ್ಟ್ ಚಾರ್ಜು ಆಗುವುದಿಲ್ಲ. ಅದನ್ನು ಫಸ್ಟ್ ಚಾರ್ಜು ಎಂದು ಭಾವಿಸಿ ಅದರ ಮೇರೆ ಸಾಲವನ್ನು ಕೊಡುವುದಕ್ಕಾಗುವುದಿಲ್ಲವೆನ್ನುವ ಸ್ಥಿತಿ ಬಂದಿದೆ. ನೆನ್ನೆ ಮೊನ್ನೆಯವರೆಗೂ ಯಳಂದೂರು ಜಹಗೀರಿಯಲ್ಲಿ ಆ ಕಷ್ಟ ಇತ್ತು. ಆ ಕಷ್ಟ ಪರಿಹಾರವಾಗುವುದಕ್ಕೆ ಈಗ ಇರುವುದು ಇದೊಂದೇ ಮಾರ್ಗ. ಉತ್ತರ ಇಂಡಿಯಾದ ಲ್ಯಾರತಕ್ಕ ಅಥವಾ ಮದರಾಸು ಪ್ರಾಂತ್ಯದಲ್ಲಿರತಕ್ಕ ಜಹಗೀರಿಗಳಿಗೂ ನಮಗೂ ಯಾವ ಸಂಬಂಧವೂ ಇಲ್ಲ. ಅಲ್ಲಿನ ಜಹಗೀರಿಗಳು ಬೇರೆ ಇಲ್ಲಿನ ಜಹಗೀರಿಗಳು ಬೇರೆ. ಇಲ್ಲಿ ಯಾವಾಗ ರೈತವಾರಿ ಪದ್ಧತಿ ಬಂದು ಬಿಟ್ಟಿತೋ ಆಗ ಮೊದಲಿದ್ದ ಕಷ್ಟ ಈಗ ಇಲ್ಲ. ಈಗ ನಮ್ಮಲ್ಲಿರತಕ್ಕ 2,100 ಗ್ರಾಮಗಳ ಪೈಕಿ 600 ಗ್ರಾಮಗಳಿಗೆ ಮಾತ್ರ ಸರ್ವೆ ಸೆಟ್ಲ್‌ಮೆಂಟ್ ಆಗಿದೆ. ಬಾಕಿ 1,500 ಗ್ರಾಮಗಳಲ್ಲಿ ಸರ್ವೆ ಸೆಟ್ಲ್‌ಮೆಂಟ್ ಆಗಿಲ್ಲ ಎಂದು ಮಾನ್ಯ ಸಚಿವರು ಹೇಳಿದರು. ರೈತವಾರಿ ಪದ್ಧತಿ ಪ್ರಕಾರ ಸರ್ವೆ ಸೆಟ್ಲ್‌ಮೆಂಟ್ ಆಗಿರುವ ಕಡೆ ಯಾವ ಕಷ್ಟವೂ ಇಲ್ಲ. ಶ್ರೀ ಕೃಷ್ಣಪ್ಪನವರು ಹೇಳಿದ್ದು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಅವರು ಕೋಲಾರದ ವಿಚಾರ ಹೇಳುವಾಗ ಅಲ್ಲಿ ಏನೋ ಬಹಳ ಅಲ್ಲೋಲಕಲ್ಲೋಲವಾಗಿದೆ. ಇನಾಂದಾರರು ಬಹಳ ಹಿಂಸೆ ಕೊಡುತ್ತಿದ್ದಾರೆ ಎಂದು ಹೇಳಿದರು. ಕೋಲಾರ ಪ್ರಾಂತದಲ್ಲಿ ರೈತರಿಗೆ ಅಂಥ ಕರುಕುಳ ಕೊಡತಕ್ಕ ಇನಂ, ಇನಾಂದಾರ ಇದ್ದಾನೆಯೇ ಅಂತ ನನಗೆ ಅನ್ನಿಸಿತು. ನಮ್ಮ ಅನುಭವದಲ್ಲಿ ನಮ್ಮ ಕಡೆ ಶ್ರೀ ಹುಚ್ಚೇಗೌಡರು ಹೇಳಿದ ಹಾಗೆ ಇನಾಂ

ದಾರರು ಎಂದರೆ ಬರೀ ಒಂದು ಬರುದೇ ಏನಾ ಆ ಮಹಾರಾಯನ ಕಷ್ಟ ಹೇಳುವ ಹಾಗಿಲ್ಲ. ಆತನಿಗೆ ಜಮೀನು ಕಂದಾಯವೂ ಬರುವ ಹಾಗಿಲ್ಲ. ಊರಿನಲ್ಲಿ ವಾಸಮಾಡುವ ಹಾಗೂ ಇಲ್ಲ. ಈ ರೀತಿ ಅನೇಕ ಗ್ರಾಮಗಳಲ್ಲಿ ಇದೆ. ಹಾಗಿರುವಾಗ ಕೋಲಾರದಲ್ಲಿ ಆ ರೀತಿ ಇರುವುದು ಯಾರ ದುರಾದೃಷ್ಟವೋ ಏನೋ ಕಾಣೆ! ನನಗೆ ತಿಳಿದಹಾಗೆ ನಮ್ಮ ಕಡೆ ಇನಾಂದಾರರು ಇಂಥಾ ಒಂದು ಮಾನೂದೆ ಬಂದು ಅವರ ಕಷ್ಟಗಳಿಂದ ಬಿಡುಗಡೆ ಹೊಂದಿದರೆ ಅವರ ಮನೆಯಲ್ಲಿ ದೇವರಿಗೆ ಮಂಗಳಾರತಿಮಾಡಿ, ಹಬ್ಬ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಇನಾಂ ಗ್ರಾಮ ಹೊರಟು ಹೋಗುವುದರಿಂದ ಬಹಳ ಪ್ರಯೋಜನವಿದೆ ಮತ್ತು ಪ್ರಜಾಪ್ರಭುತ್ವ ಬಂದಮೇಲೆ ಪ್ರಜಾಪ್ರಭುತ್ವವನ್ನು ನಡೆಸತಕ್ಕ ಕಾಂಗ್ರೆಸ್‌ನವರು ಅಧಿಕಾರದಲ್ಲಿರುವಾಗ ಈ ಕಾನೂನನ್ನು ಸರ್ವಸಮ್ಮತವಾಗಿ ತಂದಿರುವುದು ಬಹಳ ಶ್ಲಾಘನೀಯವಾದದ್ದು. ನನ್ನ ಮಿತ್ರರು ಹೇಳಿದಂತೆ ನಾಳೆಯ ದಿನದಿಂದ ಕಾಂಗ್ರೆಸ್‌ನವರು ಜೋಡಿ, ಜಹಗೀರಿಗಳನ್ನು ತೆಗೆದುಹಾಕುವುದರಲ್ಲಿ ಪೈಪೋಟಿ ಕಾರ್ಯಕ್ರಮ ಕೈಗೊಂಡು ಮಹೋಪಕಾರಮಾಡಿದರು ಎಂದು ಎದೆ ತಟ್ಟಿಕೊಂಡು ಹೇಳಬಹುದು.

ಇದಕ್ಕೆ ಕಾರಣ ಇಷ್ಟೆ: ಇದರಲ್ಲಿ ಜನತಾಶಕ್ತಿ ಇರುವುದರ ದೆಶೆಯಿಂದ, ಜನರ ಪರವಾಗಿ ಸರ್ಕಾರವನ್ನು ನಡೆನುವ ಈ ಕಾಲದಲ್ಲಿ ಯಾವ ಕಾನೂನನ್ನು ಬೇಕಾದರೂ ಒಂದೇ ಪಕ್ಷವಾಗಿ ಮಾಡಬಹುದಾಗಿತ್ತು. ಆದರೆ ಇಂಡಿಯಾ ಸರ್ಕಾರದವರು ನಮ್ಮ ಭಾರತ ದೇಶಕ್ಕೆ ರಾಜಾಂಗವನು ರಚಿನುವ ಕಾಲದಲ್ಲಿ ಇಲ್ಲಿ ಯಾರ ನ್ಯಾಯವನ್ನೂ ಕೂಡ ಸರಿಯಾದ ಪರಿಹಾರವನ್ನು ಕೊಡದೆ ತೆಗೆದುಕೊಳ್ಳಬಾರದೆಂಬ ತೀರ್ಮಾನಕ್ಕೆ ಬಂದಿರುವುದರ ದೆಶೆಯಿಂದ ಆ ನಿಯಮವನ್ನನುಸರಿಸಿ ಈ ಕಾನೂನಿನಲ್ಲಿ ಮಾನ್ಯನಚಿವರು ಉದಾರವಾಗಿ ಯಾವರೀತಿ ಇನಾಂದಾರರುಗಳಿಗೆ ಪರಿಹಾರವನ್ನು ಕೊಡಬೇಕು ಮತ್ತು ರೈತರುಗಳಿಗೆ ಯಾವರೀತಿ ಅನುಕೂಲಮಾಡಬೇಕೆಂಬುದರ ವಿಷಯದಲ್ಲಿ ಬಹಳಮಟ್ಟಿಗೆ ಮುಂದುವರಿದಿದ್ದಾರೆಂದು ನಾನು ಖಂಡಿತವಾಗಿ ಹೇಳಬಲ್ಲೆ.

Shall I continue, Sir, for it is already past Six?

ಅಧ್ಯಕ್ಷರು.— ಇನ್ನೂ ತಮಗೆ ಎಷ್ಟು ಕಾಲಬೇಕು?

ಶ್ರೀ ಎಸ್. ರಂಗರಾಮಯ್ಯನವರು.—ಇನ್ನೂ ಸ್ವಲ್ಪಮಟ್ಟಿನ ಕಾಲ ಬೇಕಾಗುತ್ತದೆ.

ಅಧ್ಯಕ್ಷರು.—ಹಾಗಾದರೆ ನಾಳೆ ಮುಂದುವರಿಸಬಹುದು.

ಸಭೆಯನ್ನು ನಾಳೆ ಒಂದು ಗಂಟೆಯವರೆಗೆ ಮುಂದುವರಿಸಲಾಗಿದೆ. ಈ ಬಿಲ್ಲಿನ ಮೇಲೆ ಚರ್ಚೆ ಮುಂದುವರಿಸಲಾಗುತ್ತೆ.

The Assembly adjourned at Three Minutes past Six of the Clock to meet again at One of the Clock on Wednesday, 21st March 1951.

WD 3189—GPB—500—17-4-51